# ಅತಿಥಿ ದೇವೋಭವ

# ATHITHI DEVOBHAVA

www.bangalorehotelsassn.com

BANGALORE

ಸಂಪುಟ: 11 ಸಂಚಿಕೆ: 11

ಮಾರ್ಚ್ 2020 ರೂ. 10/- ಪುಟಗಳು: 40

Registerd: RNP/KA/BGS/2172/2018-20 Dtd. 02-07-2012

RNI# KAR KAN/2009/30387 Dtd. 19-03-2012


## ಬಿಬಿಹೆಚ್ಎ ಚಟುವಟಿಕೆಗಳು



2020-25 ಹೊಸ ಪ್ರವಾಸೋದ್ಯಮ ನೀತಿ



ಬಿಬಿಹೆಚ್ಎ ಓರಿಯಂಟೇಷನ್ ಕಾರ್ಯಕ್ರಮ



ಬಿಬಿಹೆಚ್ಎ ಸದಸ್ಯರ ಸಾಫ್ಟವೇರ್ ಬಿಡುಗಡೆ




ಬೆಂಗಳೂರಿನ ಹೋಟೆಲ್ ಮಾಲೀಕರು ಗೋವಾದ ರಾಮಚಂದ್ರಪ್ಪ ರಂಗಪ್ಪ ಕಾಮತ್ ಹೋಟೆಲ್‌ನಲ್ಲಿ ಆತಿಥ್ಯ.

**ಬೃಹತ್ ಬೆಂಗಳೂರು ಹೋಟೆಲ್ ಸಂಘದ ಮುಖವಾಣಿ**

ಜಾಹೀರಾತು

PROFECTUS CAPITAL

# Enterprise Mortgage Loans

Property backed loans for Hotels and Restaurants



## Your partner in progress

Profectus Capital aims to be a partner in progress for hotels and restaurants businesses and seeks to enhance lives of customers by understanding their needs, providing Innovative and customized solutions through ethical and transparent dealings.

### Value Proposition

- Higher loan eligibility
- Industry specific customised repayment structure
- Innovative products to suit current business requirement
- Minimum documentation and faster decisioning
- Flexible collateral norms with higher loan to value
- Best customer service

**Other Products We Offer:**

**Machinery and Equipment Finance** for Kitchen Equipment, Food Packaging Machinery purchase etc.,
**Merchant Cash Advance** for Working Capital requirements

Contact Us : Vijay Kotegar | Mobile: 92412 62055 | E-Mail: vijaya.kotegar@profectuscapital.com

ಗೌರವಾಧ್ಯಕ್ಷರು
ಶ್ರೀ ಕೆ. ಉಮೇಶ್ ಶೆಟ್ಟಿ
9845844447

ಅಧ್ಯಕ್ಷರು
ಶ್ರೀ ಪಿ.ಸಿ. ರಾವ್
9844494630

ಉಪಾಧ್ಯಕ್ಷರು
ಶ್ರೀ ಜಿ. ಕೆ. ಸೋಮಯಾಜಿ
9845699995

ಉಪಾಧ್ಯಕ್ಷರು
ಶ್ರೀ ಎಂ. ವಿ. ರಾಘವೇಂದ್ರ
9880093264

ಗೌರವ ಕಾರ್ಯದರ್ಶಿ
ಶ್ರೀ ಸುಬ್ರಮಣ್ಯ ಹೊಳ್ಳ ಎಸ್.
9845042007

ಜಂಟಿ ಕಾರ್ಯದರ್ಶಿ
ಶ್ರೀ ಚಂದ್ರಹಾಸ. ಎಸ್
9448881200

ಜಂಟಿ ಕಾರ್ಯದರ್ಶಿ
ಪ್ರಭಾಕರ ಶೆಟ್ಟಿ
9886295070

ಖಜಾಂಚಿ
ಶ್ರೀ ವೀರೇಂದ್ರ ಎನ್.ಕಾಮತ್
9845259099

## ಮೆನುಕಾರ್ಡ್


- ಅಧ್ಯಕ್ಷರ ನುಡಿ 4
- 2020–25 ಹೊಸ ಟೂರಿಸಮ್ ಪಾಲಿಸಿ 8
- ಪ್ರವಾಸಿ ಕೇಂದ್ರಗಳಲ್ಲಿ ಉತ್ತಮ ಹೋಟೆಲುಗಳು ಬೇಕು 10
- Prevention Is Better Than Cure 14
- Hotel Industry requirements 15
- ಸಮರ್ಥ ನಾಯಕತ್ವದಲ್ಲಿ ಮಾದರಿ ಸಂಘ 16
- ಚಿತ್ರ ಸಂಪುಟ 20
- Employing children below 14 Years is an offence 22
- ಹೊಸ ರುಚಿ 22
- ವಾರ್ಷಿಕ ವಂತಿಗೆ 26
- HOTELIERS RESPONSIBILITY 28
- ಬೀದಿ ಬದಿಯ ತಿಂಡಿಗಾಡಿಗಳು 30
- UDHYOG AADHAAR 32
- ಸಂಘದ ಕಾರ್ಯಕಾರಿ ಮಾಸಿಕ ಸಭೆ 34


## ಎಲ್ಲಾ ಸದಸ್ಯರ ಗಮನಕ್ಕೆ

2020–23 ಕ್ಕೆ ಹೊಸ ಕಾರ್ಯಕಾರಿ ಸಮಿತಿ ರಚನೆಯಾಗಬೇಕಾಗಿದೆ. ಕಾರ್ಯಕಾರಿ ಸಮಿತಿಗೆ ಸದಸ್ಯರಾಗಲು ಆಸಕ್ತಿಯುಳ್ಳವರು ಇದೇ ತಿಂಗಳು ಮಾರ್ಚ್ 31ರ ಒಳಗೆ ಸಂಘಕ್ಕೆ ಬಂದು ಅರ್ಜಿಯನ್ನು ಸಲ್ಲಿಸಬೇಕೆಂದು ವಿನಂತಿ.

ಹೆಚ್ಚಿನ ಮಾಹಿತಿಗಾಗಿ ಸಂಘಕ್ಕೆ ಸಂಪರ್ಕಿಸಿ

**080-26509314, 9606076487**

ಬಿಬಿಹೆಚ್ಎ ಸದಸ್ಯರಿಗಾಗಿ
24x7 ಸಹಾಯವಾಣಿ **+91 96060 76487**

# ಅಧ್ಯಕ್ಷರ ನುಡಿ

ಪಿ.ಸಿ. ರಾವ್



ಚೈನಾದಲ್ಲಿ ಹುಟ್ಟಿ ಜಗತ್ತಿನಾದ್ಯಂತ ಹರಡುತ್ತಿರುವ ಕೊರೊನಾ ವೈರಸ್‌ನಿಂದಾಗಿ ಸಾವಿರಾರು ಮಂದಿ ಸಾವಿಗೀಡಾಗಿರುವುದು ಲಕ್ಷಾಂತರ ಜನ ಸೋಂಕಿತರಾಗಿರುವ ವರದಿಗಳು ಆಘಾತಕಾರಿ ವಿಚಾರ. ನಮ್ಮ ದೇಶದಲ್ಲೂ ಕೆಲವೊಂದು ಕಡೆ ಈ ವೈರಸ್ ಸೋಂಕಿತರು ಕಂಡುಬಂದಿರುವುದರಿಂದ ನಾವೆಲ್ಲರೂ ಜಾಗೃತರಾಗಿರಬೇಕಾದ ಅಗತ್ಯವಿದೆ.

ವಿಶೇಷವಾಗಿ ನಮ್ಮ ಹೋಟೆಲು ಉದ್ಯಮಕ್ಕೆ ಈ ಬೆಳವಣಿಗೆಯಿಂದ ಸಾಕಷ್ಟು ಆತಂಕವಿದೆ. ಕೊರೊನಾ ವೈರಸ್ ಹರಡುವಿಕೆಯ ನಂತರ ಜಾಗತಿಕ ಮಟ್ಟದಲ್ಲೇ ಪ್ರವಾಸೋದ್ಯಮಕ್ಕೆ ಬಹುದೊಡ್ಡ ಹೊಡೆತ ಬಿದ್ದಿದೆ. ನಮ್ಮ ಹೋಟೆಲುಗಳಲ್ಲಿ ತಂಗುವಂತಹ ಎಲ್ಲ ಗ್ರಾಹಕರ ಬಗ್ಗೆ ಹೆಚ್ಚಿನ ಗಮನವಿರಿಸುವುದು ನಮ್ಮ ಆದ್ಯ ಕರ್ತವ್ಯ.

**ಈಗಾಗಲೇ ಆರೋಗ್ಯ ಇಲಾಖೆಯು ಸಂಘವನ್ನು ಸಂಪರ್ಕಿಸಿ ಹೋಟೆಲು ಮಾಲೀಕರು ಜಾಗೃತರಾಗಿರಬೇಕೆಂದು ಸೂಚನೆ ನೀಡಿರುತ್ತದೆ. ವಿದೇಶೀಯರು ಆಗಮಿಸಿದ ಸಂದರ್ಭದಲ್ಲಿ ಹೆಚ್ಚಿನ ಗಮನ ನೀಡಬೇಕಾದದ್ದು ಬಹಳ ಮುಖ್ಯ ವಿಚಾರ.**

ನಮ್ಮ ಎಲ್ಲ ಕಾರ್ಮಿಕ ಸಿಬ್ಬಂದಿಗಳಿಗೂ ಈ ವಿಚಾರವಾಗಿ ಸೂಕ್ತ ತರಬೇತಿ ಮತ್ತು ಮಾಹಿತಿಯನ್ನು ನೀಡಬೇಕಾದ್ದು ನಮ್ಮ ಜವಾಬ್ದಾರಿ.



## ರಸ್ತೆ ಬದಿ ಹೋಟೆಲ್ ಬಂದ್

ಬೆಂಗಳೂರು.ಮಾ.10. ಬೆಂಗಳೂರು ನಗರದಲ್ಲಿ ಕಾಲರಾ ಪ್ರಕರಣಗಳು ವರದಿಯಾಗಿವೆ. ರೋಗ ಹರಡದಂತೆ ಬಿಬಿಎಂಪಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಬೀದಿ ಬದಿ ತೆರೆದಿಟ್ಟ ಆಹಾರ ಮಾರಾಟವನ್ನು ನಿಷೇಧಿಸಿ ಆದೇಶವನ್ನು ಹೊರಡಿಸಿದೆ.

ಬಿಬಿಎಂಪಿ ಕಾಲರಾ ಮತ್ತು ... ಪದಾರ್ಥ ಮಾರಾಟ ಮಾಡುವುದನ್ನು ನಿರ್ಬಂಧಿಸಿದೆ. ಆಹಾರ ಪದಾರ್ಥ ಮಾರುವ ಅಂಗಡಿಗಳನ್ನು ತೆರವು ಮಾಡುತ್ತಿದೆ.

ನೈರ್ಮಲ್ಯದ ಕೊರತೆ ಇರುವುದರಿಂದ ಸಾರ್ವಜನಿಕರು ರಸ್ತೆ ಬದಿ ಮಾರಲಾಗುವ ಆಹಾರಗಳನ್ನು ಸೇವಿಸದಂತೆ ಬಿಬಿಎಂಪಿ ಆಯುಕ್ತ ಬಿ.ಎಚ್.ಅನಿಲ್ ಕುಮಾರ್ ಟ್ವೀಟ್ ... ಜೈನ್ ಸಾರ್ವಜನಿಕ ಆರೋಗ್ಯ ಸಮಿತಿ ಸಭೆಯನ್ನು ನಡೆಸಿದರು. ಸಭೆಯಲ್ಲಿ ಬೀದಿ ಬದಿ ತೆರೆದಿಟ್ಟ ಆಹಾರ ಮಾರಾಟವನ್ನು ನಿಷೇಧಿಸಲು ತೀರ್ಮಾನ ಕೈಗೊಳ್ಳಲಾಗಿತ್ತು. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಪಾಲಿಕೆ ವ್ಯಾಪ್ತಿಯ ಬೀದಿ ಬದಿಗಳಲ್ಲಿ ತೆರೆದಿಟ್ಟ ಆಹಾರ ಪದಾರ್ಥಗಳ ...

ಕೊರೊನಾವೈರಸ್ ಹರಡದಂತೆ ತಡೆಗಟ್ಟಲು ಕೈಗೊಳ್ಳಬೇಕಾದ ಹಲವಾರು ಕ್ರಮನಿಯಮಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಈಗಾಗಲೇ ಪ್ರಕಟಣೆ ಮತ್ತು ಸುತ್ತೋಲೆಗಳ ಮೂಲಕ ಪ್ರಚಾರಪಡಿಸಿದ್ದಾರೆ. ಈ ವಿಚಾರಗಳ ಬಗ್ಗೆ ಗಮನವಿಟ್ಟು ಸೂಕ್ತ ಕ್ರಮಗಳನ್ನು ಅನುಸರಿಸಿದಲ್ಲಿ ಕೊರೊನಾ ಸಮಸ್ಯೆ ಇನ್ನಷ್ಟು ಗಂಭೀರವಾಗದಂತೆ ನಾವು ತಡೆಯಬಹುದಾಗಿದೆ.

## ಹಾರೋಹಳ್ಳಿಯ ನಿವೇಶನ

2011ರಲ್ಲಿ ನಮ್ಮ ಸಂಘಕ್ಕೆ ಶ್ರೀ ಕೆ.ಎನ್.ವಾಸುದೇವ ಅಡಿಗರು ಅಧ್ಯಕ್ಷರಾಗಿದ್ದಾಗ ಸಂಘದ ವತಿಯಿಂದ ಆಹಾರ ಪರೀಕ್ಷಾ ಪ್ರಯೋಗಾಲಯ ಮತ್ತು ಕಾರ್ಮಿಕ ತರಬೇತಿ ಕೇಂದ್ರ ಸ್ಥಾಪನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಾರೋಹಳ್ಳಿಯಲ್ಲಿ ಒಂದು ಎಕರೆ ನಿವೇಶನಕ್ಕಾಗಿ ಬಹಳ ಪ್ರಯತ್ನ ನಡೆಸಿದ್ದರು. ನಿವೇಶನವು ಶೇ.50ರ ದರದಲ್ಲಿ ಮಂಜೂರಾಗಿತ್ತು.

ಮುಂದೆ ಶ್ರೀ ಬಿ. ಚಂದ್ರಶೇಖರ ಹೆಬ್ಬಾರರು ಅಧ್ಯಕ್ಷರಾಗಿದ್ದಾಗ ಅದಕ್ಕೆ ಸಂಬಂಧಿಸಿದಂತಹ 30 ಲಕ್ಷ ರೂಪಾಯಿಗಳನ್ನು ನಮ್ಮ ಹಿತೈಷಿ ಹೋಟೆಲು ಉದ್ಯಮದಾರರಿಂದ ಸಂಗ್ರಹಿಸಿ ಪಾವತಿಸಲಾಗಿತ್ತು. ಆದರೂ ಕಾನೂನಿನ ಕೆಲವಾರು ಅಡೆತಡೆಗಳು ಮತ್ತು ಅಲ್ಲಿನ ಸ್ಥಳೀಯ ರೈತರ ವಿರೋಧದಿಂದ ನಿವೇಶನವನ್ನು ಪಡೆಯಲು ಬಹಳ ಕಷ್ಟವಾಗಿತ್ತು.

**ಮುಂದೆ ನಮ್ಮ ಪದಾಧಿಕಾರಿಗಳ ಸಹಕಾರ ಬೆಂಬಲಗಳಿಂದ ಹಾಗೂ ಸತತ ಪ್ರಯತ್ನದಿಂದ ಹಾರೋಹಳ್ಳಿಯ ಬೇರೊಂದು ಉತ್ತಮ ಜಾಗದಲ್ಲಿ ಒಂದು ಎಕ್ರೆ ನಿವೇಶನವನ್ನು ಮಂಡಳಿಯು**



ನಮ್ಮ ಸಂಘಕ್ಕೆ ಒದಗಿಸಿದೆ ಎಂದು ಹೇಳಲು ಹರ್ಷಿಸುತ್ತಿದ್ದೇವೆ. ಈ ವಿಷಯದಲ್ಲಿ ಅಧಿಕಾರಿಗಳನ್ನು ಭೇಟಿ ಮಾಡುವುದಕ್ಕೆ ಸುಮಾರು 35ರಿಂದ 40 ಬಾರಿ ಮಂಡಳಿಯ ಕಾರ್ಯಾಲಯಕ್ಕೆ ತೆರಳಿದ್ದು ಈ ಸಂದರ್ಭದಲ್ಲಿ ಸಹಕರಿಸಿದ ಎಲ್ಲ ಪದಾಧಿಕಾರಿಗಳಿಗೆ ಮತ್ತು ಹೋಟೆಲು ಮಾಲೀಕರಿಗೆ ಸಂಘದ ಪರವಾಗಿ ಕೃತಜ್ಞತೆ ಸಲ್ಲಿಸುತ್ತಿದ್ದೇವೆ.ಇನ್ನು ಕೆಲವೇ ದಿನಗಳಲ್ಲಿ ಈ ನಿವೇಶನವನ್ನು ಉಪಯುಕ್ತವಾಗುವ ರೀತಿಯಲ್ಲಿ ಅಭಿವೃದ್ಧಿಪಡಿಸುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ.

## ಹೋಟೆಲು ಉದ್ಯಮದಾರರ ಸಮಾವೇಶ

ಮೇ 21 ಮತ್ತು 22ರಂದು ಬೆಂಗಳೂರು ನಗರದಲ್ಲಿ ಸೌತ್ ಇಂಡಿಯಾ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಶನ್‌ನ ಆಯೋಜನೆಯಡಿ ನಗರದ ಶಾಂಗ್ರಿಲಾ ಹೋಟೆಲಿನಲ್ಲಿ ಹೋಟೆಲ್ ಉದ್ಯಮದಾರರ ಸಮಾವೇಶ ನಡೆಯಲಿದ್ದು ಬೆಂಗಳೂರು ನಗರದ ಹೋಟೆಲು ಉದ್ಯಮದಾರರೆಲ್ಲರೂ ಈ ಸಮ್ಮೇಳನದಲ್ಲಿ ಭಾಗವಹಿಸುವಂತೆ ಎಸ್ಐಹೆಚ್ಆರ್ಎ ಅಧ್ಯಕ್ಷ ಶ್ರೀ ಶ್ಯಾಮರಾಜು ಅವರು ತಿಳಿಸಿದ್ದಾರೆ.

## ಬೆಸ್ಟ್ ಬಿಫೋರ್ ಡೇಟ್ ಕಡ್ಡಾಯ

ಜೂನ್ 1ರಿಂದ ಯಾವುದೇ ಸಿಹಿತಿನಿಸುಗಳು ಮತ್ತು ಕುರುಕುಲು ತಿನಿಸುಗಳ ಪ್ಯಾಕಿಂಗಿನ ಮೇಲೆ ಬೆಸ್ಟ್ ಬಿಫೋರ್ ಡೇಟ್ ನಮೂದಿಸುವುದು ಕಡ್ಡಾಯವೆಂದು ಎಫ್ಎಸ್ಎಸ್ಎಐ (ಆಹಾರ ಸುರಕ್ಷಾ ಮತ್ತು ಗುಣಮಟ್ಟ ನಿಯಂತ್ರಣ ಮಂಡಳಿಯು) ಸುತ್ತೋಲೆ ಹೊರಡಿಸಿದೆ. ಅಲ್ಲದೆ ಮಂಡಳಿಯು ಇದೇ ಕಾನೂನಿನಡಿ ಕೆಲವೊಂದು ಹೋಟೆಲುಗಳಿಗೆ ನೋಟೀಸು ನೀಡುತ್ತಿರುವುದು ಆತಂಕದ ಬೆಳವಣಿಗೆ. ಮಾಲಿನ್ಯ ನಿಯಂತ್ರಣ ಮಂಡಳಿಯು ಕೂಡಾ ಕೆಲವೊಂದು ಕಾನೂನು ನಿಯಮಗಳಡಿಯಲ್ಲಿ ಹಲವಾರು ಹೋಟೆಲುಗಳಿಗೆ ದೊಡ್ಡ ಮೊತ್ತದ ದಂಡ ವಿಧಿಸುತ್ತಿರುವುದು ಶೋಚನೀಯ.

## ಕಾರ್ಯಾಗಾರ

ಬೆಂಗಳೂರು ಹೋಟೆಲುಗಳ ಸಂಘದಿಂದ ಹೋಟೆಲು ಮಾಲೀಕರಿಗಾಗಿ ಒಂದು ದಿನದ ಕಾರ್ಯಾಗಾರವೊಂದನ್ನು ಇತ್ತೀಚೆಗೆ ನಡೆಸಲಾಗಿದ್ದು ಇದರಲ್ಲಿ ಭಾಗವಹಿಸಿದ್ದ ಹೋಟೆಲು ಮಾಲೀಕರೆಲ್ಲ ಕಾರ್ಯಾಗಾರದ ಉಪಯುಕ್ತತೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕಾರ್ಯಾಗಾರದಲ್ಲಿ ಭಾಗವಹಿಸಿ ಸಾರ್ಥಕಗೊಳಿಸಿದ ಎಲ್ಲಾ ಹೋಟೆಲು ಮಾಲೀಕರಿಗೆ ಅಭಿನಂದನೆಗಳು.








## ಸಂಘದ ಸಾಫ್ಟ್ ವೇರ್

ಸಂಘದ ಸದಸ್ಯರ ಸಂಪೂರ್ಣ ವಿವರಗಳನ್ನೊಳಗೊಂಡ ಸಾಫ್ಟ್ ವೇರ್ ತಯಾರಾಗಿದ್ದು ಮುಂದಿನ ಏಪ್ರಿಲ್ ಒಂದನೇ ತಾರೀಕಿನಿಂದ ಈ ಸಾಫ್ಟ್‌ವೇರ್‌ನ್ನು ಅಳವಡಿಸಲಾಗುವುದು.

## ಕೆಪಿಹೆಚ್ಆರ್ಎ ಸಭೆ

ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಹಾರ ಮಂದಿರಗಳ ಸಭೆಯು ಇತ್ತೀಚೆಗೆ ಕಾರವಾರದಲ್ಲಿ ನಡೆದಿದ್ದು ಈ ಸಭೆಯಲ್ಲಿ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದಿಂದ ಹಲವಾರು ಸದಸ್ಯರು ಭಾಗವಹಿಸಿದ್ದರು. ಬೆಂಗಳೂರಿನಿಂದ ಗೋವಾದ ಮೂಲಕ ಕಾರವಾರಕ್ಕೆ ತೆರಳುವ ವೇಳೆ ಮತ್ತು ಮರಳಿ ಬರುವ ಸಂದರ್ಭದಲ್ಲಿ ಗೋವಾದಲ್ಲಿ ಕಾಮತ್ ಹೋಟೆಲ್ ಸಾಯಿ ಸಾಗರ್ ಹೋಟೆಲ್‌ಗಳಲ್ಲಿ ನಮಗೆ ಅತ್ಯುತ್ತಮ ಸತ್ಕಾರ ಮತ್ತು ಊಟೋಪಚಾರಗಳನ್ನು ಒದಗಿಸಿ ಪ್ರಯಾಣವನ್ನು ಅವಿಸ್ಮರಣೀಯಗೊಳಿಸಿದ ಹೋಟೆಲುಗಳ ಮಾಲೀಕರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಏಪ್ರಿಲ್ 1ರಿಂದ ಕನಿಷ್ಠ ವೇತನ ತುಟ್ಟಿ ಭತ್ತೆಯು ರೂ.418ರಷ್ಟು ಹೆಚ್ಚಳವಾಗಿದ್ದು, ಇದನ್ನು ಎಲ್ಲ ಹೋಟೆಲು ಮಾಲೀಕರು ಅಳವಡಿಸಿಕೊಳ್ಳಬೇಕಾಗಿದೆ.

## ಹೋಟೆಲ್ ಬ್ಯಾಂಕಿನ ಚುನಾವಣೆ: ಜಯಶಾಲಿಗಳಿಗೆ ಅಭಿನಂದನೆ

ಇತ್ತೀಚೆಗೆ ನಡೆದ ಹೋಟೆಲ್ ಉದ್ಯಮದಾರರ ಸಹಕಾರಿ ಸೌಹಾರ್ದ ಬ್ಯಾಂಕಿನ ಚುನಾವಣೆಯಲ್ಲಿ ಜಯಶಾಲಿಗಳಾದ ಬ್ಯಾಂಕಿನ ನಿರ್ದೇಶಕ ಮಂಡಳಿ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಮುಂದೆಯೂ ನೂತನ ಆಡಳಿತ ಮಂಡಳಿಯ ನೇತೃತ್ವದಲ್ಲಿ ಹೋಟೆಲ್ ಬ್ಯಾಂಕ್ ಇನ್ನಷ್ಟು ಪ್ರಗತಿಯನ್ನು ಕಾಣಲಿ ಎಂದು ಆಶಿಸುತ್ತೇವೆ.

## ಸದಸ್ಯತ್ವ ಪಡೆಯಿರಿ

ಬೆಂಗಳೂರಿನ ಎಲ್ಲ ಹೋಟೆಲು ಉದ್ಯಮದಾರರು ನಮ್ಮ ಸಂಘದ ಸದಸ್ಯತ್ವ ಪಡೆಯಬೇಕು ಮತ್ತು ನಾವು ಆಗಿಂದಾಗ್ಗೆ ನಡೆಸುವ ಸಭೆಗಳು ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಯೋಜನಗಳನ್ನು ಪಡೆಯಬೇಕು ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ಮಾಡುತ್ತಾ ಪರಿಹಾರಗಳನ್ನು ಕಂಡುಕೊಳ್ಳಲು ಸದಾ ಸಂಘದೊಂದಿಗೆ ಸಂಪರ್ಕ ಸಂವಹನ ಇರಿಸಿಕೊಳ್ಳಬೇಕು.

ಏಪ್ರಿಲ್ ತಿಂಗಳಿಂದ ಎಲ್ಲ ಸದಸ್ಯರು ವಂತಿಗೆಯನ್ನು ವರ್ಷಕ್ಕೊಮ್ಮೆ ಒಂದೇ ಕಂತಿನಲ್ಲಿ ನೀಡಿ ಸಂಘ–ಕ್ಕೆ ಸಹಕಾರ ನೀಡಬೇಕಾಗಿ ವಿನಂತಿ. ಇದರಿಂದ ನಮ್ಮ ಮೆಸೆಂಜರುಗಳ ಮೇಲಿನ ಕೆಲಸದ ಒತ್ತಡ ಕಡಿಮೆಯಾಗುವುದರಿಂದ ಹೊಸ ಹೋಟೆಲು ಮಾಲೀಕರನ್ನು ಸಂಪರ್ಕಿಸಲು, ನೋಂದಾಯಿಸಲು ಮತ್ತು ಇತರ ಚಟುವಟಿಕೆಗಳಲ್ಲಿ ತೊಡಗಿಸಲು ಸಾಧ್ಯವಾಗುತ್ತದೆ.

ಸದಾ ತಮ್ಮ ಸಹಕಾರದ ನಿರೀಕ್ಷೆಯೊಂದಿಗೆ

– ಪಿ.ಸಿ.ರಾವ್, ಅಧ್ಯಕ್ಷರು

ಜಾಹೀರಾತು

ಎಲ್ಲರಿಗೂ ಆತ್ಮೀಯ ವಂದನೆಗಳು

MANUFACTURER OF
CUSTOMISED
HOTEL CHAIRS & SOFAS

Rosette
FURNITURE. ELEGENCE.

ಹೋಟಲುಗಳಿಗೆ ಸಂಬಂಧ ಪಟ್ಟ ಕುರ್ಚಿಗಳು ಹಾಗೂ ಸೋಫಾಗಳು ತಯಾರಿಸಲಾಗುವುದು.





- REASONABLE FACTORY PRICE .
- GUARANTEED PRODUCTS.
- POLISH COLOUR AVAILABLE.
- FABRIC OPTION AVAILABLE.
- ALL PRODUCTS ARE MANUFACTURED AT OUR FACTORY.

REASONABLE PRICE GUARANTEED

GUARANTEE BEST QUALITY

**Factory Address :**

SRI RAM & COMPANY
# 43/1, Attibele Industrial Area,
Near Guest Line Hotel, Hosur Road,
Bengaluru - 562 107.

97434 99010
98447 11822
99649 44844 (Sales)

harshad.rosetteproducts@gmail.com

# ಹೋಟೆಲ್ ತಿಂಡಿಗಳ ಬೆಲೆ

ಬೆಂಗಳೂರು ಮಹಾನಗರದಲ್ಲಿರುವಂತಹ ಹೋಟೆಲುಗಳು ಅತ್ಯಂತ ನ್ಯಾಯೋಚಿತವಾದ ಕೈಗೆಟುಕುವ ದರದಲ್ಲಿ ಗ್ರಾಹಕರಿಗೆ ತಿಂಡಿತಿನಿಸುಗಳನ್ನು ಒದಗಿಸುತ್ತಿರುವುದು ನಮ್ಮ ಉದ್ಯಮಕ್ಕೆ ಹೆಮ್ಮೆ ತರುವ ಸಂಗತಿ. ಇತ್ತೀಚಿನ ದಿನಗಳಲ್ಲಿ ಹೋಟೆಲು ಉದ್ಯಮವನ್ನು ಬಹಳಷ್ಟು ಸಮಸ್ಯೆಗಳು ಕಾಡುತ್ತಿವೆ. ದಿನದಿನವೂ ಹೋಟೆಲುಗಳ ಅವಶ್ಯಕ ವಸ್ತುಗಳ ಬೆಲೆಗಳಂತೂ ನಿಯಂತ್ರಣವಿಲ್ಲದೇ ಏರಿಕೆಯು ಗಗನಕ್ಕೇರುತ್ತಿವೆ. ಹಾಲು, ಮೊಸರು, ತರಕಾರಿ, ಎಣ್ಣೆ, ಬೇಳೆಕಾಳು, ಗ್ಯಾಸ ಇತ್ಯಾದಿಗಳ ಬೆಲೆಗಳು ಅನಿಯಂತ್ರಿತವಾಗಿ ಏರಿಕೆ ಕಂಡಿವೆ. ಕಟ್ಟಡ ಬಾಡಿಗೆ, ವಿದ್ಯುತ್, ನೀರಿನ ದರಗಳೂ ಏರುಮುಖವಾಗಿವೆ. ಇವೆಲ್ಲ ಹೊರೆಗಳ ಕಾರಣದಿಂದ ಹತ್ತಾರು ವರ್ಷಗಳಿಂದಲೂ ಸ್ಥಿರವಾಗಿಯೇ ಇರುವ ತಿಂಡಿತಿನಿಸುಗಳ ದರಗಳನ್ನು ಹೆಚ್ಚಿಸುವ ಅನಿವಾರ್ಯತೆ ಉಂಟಾಗಿದೆ. ಹೋಟೆಲುಗಳಲ್ಲಿ ತಿಂಡಿತಿನಿಸುಗಳ ಬೆಲೆಗಳನ್ನು ಏರಿಕೆ ಮಾಡುವುದರಿಂದ ಗ್ರಾಹಕರಿಗೆ ಸಣ್ಣ ಪ್ರಮಾಣದ ಹೊರೆಯಾಗುವುದಾದರೂ ಇಂದಿನ ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗುವುದು.

# 2020–25 ಹೊಸ ಟೂರಿಸಮ್ ಪಾಲಿಸಿ



ಸಭೆಯನ್ನು ಬನ್ನೆರುಘಟ್ಟ ಜಂಗಲ್ ಲಾಡ್ಜ್‌ನಲ್ಲಿ ಪ್ರವಾಸೋದ್ಯಮ ಸಚಿವರಾದ ಶ್ರೀ ಸಿ ಟಿ ರವಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರವಾಸೋದ್ಯಮದ ಸಂಬಂಧ ಪಟ್ಟ ಎಲ್ಲ ಇಲಾಖೆಯ ಅಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರವಾಸೋದ್ಯಮಕ್ಕೆ ಹೋಟೆಲು ಉದ್ಯಮ ಪಾತ್ರ ಪ್ರಮುಖವಾಗಿದದ್ದು ಪ್ರವಾಸಿ ತಾಣಗಳಲ್ಲಿ ಹೋಟೆಲನ್ನು ಪ್ರಾರಂಭಿಸಲು ಬೇಕಾಗುವ ಎಲ್ಲ ಅನುಕೂಲಗಳು, ಸಬ್ಸಿಡಿ, ತೆರಿಗೆ ರಿಯಾಯಿತಿಗಳನ್ನೂ ಇನ್ನು ಹೆಚ್ಚಿಗೆ ಕೊಟ್ಟು ಸಹಕರಿಸಬೇಕೆಂದು ನಮ್ಮ ಉದ್ಯಮದ ಪರವಾಗಿ ತಿಳಿಸಲಾಯಿತು ಅದರ ಜೊತೆಗೆ ಎಲ್ಲ ಪರವಾನಿಗೆಗಳನ್ನು ಏಕರೂಪವಾಗಿ ಪಡೆದುಕೊಳ್ಳುವ ವ್ಯವಸ್ಥೆ ಮಾಡುವಂತೆ ತಿಳಿಸಿದ್ದೇವೆ.

ಜಾಹೀರಾತು

# ಝೊಮಟೋ ಹೈಪರ್‌ಪ್ಯೂರ್‌ನಿಂದ ಅಡುಗೆಗೆ ಅಗತ್ಯವಾದ ಸಾಮಗ್ರಿಗಳ ಪೂರೈಕೆ

ಝೊಮಟೋ 'ಹೈಪರ್‌ಪ್ಯೂರ್' ತಾಜಾ ಪರಿಶುದ್ಧವಾದ ಮತ್ತು ಅಡುಗೆಗೆ ಅಗತ್ಯವಾದ ಪದಾರ್ಥಗಳನ್ನು ಮಾರುಕಟ್ಟೆಯಿಂದ, ನಿಮಗೆ ಯಾವುದೇ ಸಮಸ್ಯೆಯಿಲ್ಲದೆ ನಿಮ್ಮ ಮನೆಯ ಬಾಗಿಲಿಗೆ ತಲುಪಿಸುತ್ತದೆ.

- ಉತ್ತಮ ಗುಣಮಟ್ಟದ ಪದಾರ್ಥಗಳು (99% ಗುಣಮಟ್ಟದ ಸ್ವೀಕಾರ)
- ವ್ಯಾಪಕ ವರ್ಗಗಳಿಂದ ಆಯ್ದ ಪದಾರ್ಥಗಳು (2400ಕ್ಕೆ ಹೆಚ್ಚು ಸಾಮಗ್ರಿಗಳು ಲಭ್ಯ)
- ಮಾರನೇ ದಿನವೇ ಉಚಿತವಾಗಿ ತಲುಪಿಸುವ ವ್ಯವಸ್ಥೆ (98% ಸಕಾಲದಲ್ಲಿ ಸರಬರಾಜು)
- ಝೊಮಾಟೋನಲ್ಲಿ ಹೈಪರ್ ಪ್ಯೂರ್‌ಟ್ಯಾಗ್‌ನಿಂದ ಹೆಚ್ಚುವರಿ ಮಾರ್ಕೆಟಿಂಗ್‌ಗೆ ಲಾಭ
- ಆಪ್(App) ಮೂಲಕ ಸುಲಭವಾಗಿ ನಿಮ್ಮ ಬೇಡಿಕೆಯನ್ನು ಸಲ್ಲಿಸಿ.
- ಸುಲಭ ಬೆಲೆ ಮತ್ತು ಆಕರ್ಷಕ ದೈನಂದಿನ ರಿಯಾಯಿತಿ.
- ಆಪ್(App) ಮೂಲಕ ಖರೀದಿಸಿದ ಲೆಕ್ಕಾಚಾರ ಲಭ್ಯ.
- ದಿನನಿತ್ಯದ ಖರೀದಿಯಿಂದ ದಾಸ್ತಾನು ಮತ್ತು ಸಂಗ್ರಹಣೆಯ ವೆಚ್ಚವನ್ನು ಉಳಿಸಿ.
- ಹೊ.ರೇ.ಕಾ. (Hotels/Restaurants/Caterers) ಗಳ ಸೇವೆಗೆ ಮೀಸಲಾದ ಭಾರತದ ಏಕೈಕ ಸಂಸ್ಥೆ.

**ನಿಮ್ಮ ವಿಶ್ವಾಸಾರ್ಹ ಪಾಲುದಾರ**

hyperpure by zomato

www.hyperpure.comನಲ್ಲಿ ಲಾಗ್ ಆನ್ ಮಾಡಿ ಆರ್ಡರ್ ಮಾಡಿ.
ಏನಾದರೂ ಸಹಾಯ ಬೇಕಿದ್ದರೆ ದೂರವಾಣಿ ನಂ. 011-71565093 ಈ ನಂಬರ್‌ಗೆ ಕರೆ ಮಾಡಿ. ಹಾಗೂ help@hyperpure.com ಗೆ ಮೇಲ್ ಮಾಡಿ.

ಉತ್ತಮ ಗುಣಮಟ್ಟ | ಏಕೈಕ ಮಾರಾಟದ ಸಂಸ್ಥೆ | ಉತ್ತಮ/ಅಗ್ಗದ ಬೆಲೆ



ವೀರೇಂದ್ರ ಎನ್. ಕಾಮತ್
ಖಜಾಂಚಿಗಳು,
ಬಿಬಿಹೆಚ್ಎ

# ಪ್ರವಾಸಿ ಕೇಂದ್ರಗಳಲ್ಲಿ ಉತ್ತಮ ಹೋಟೆಲುಗಳು ಬೇಕು



ಚಿತ್ರ: ಶಿವಶಂಕರ ಬಣಗಾರ

ರಾಜ್ಯದ ವಿವಿಧೆಡೆಗಳ ಪ್ರವಾಸಿ ಕ್ಷೇತ್ರಗಳಲ್ಲಿ ಮೂಲಸೌಲಭ್ಯಗಳ ಕೊರತೆ ಇರುವುದೆಂಬ ದೂರುಗಳನ್ನು ನಾವು ನಿರಂತರವಾಗಿ ಕೇಳುತ್ತಲೇ ಇದ್ದೇವೆ. ರಸ್ತೆ, ನೀರು, ಶೌಚಾಲಯ, ವಸತಿ, ಊಟೋಪಹಾರ ವ್ಯವಸ್ಥೆಗಳ ಕೊರತೆಯಿಂದಾಗಿಯೇ ಪ್ರವಾಸೋದ್ಯಮವು ನಮ್ಮ ರಾಜ್ಯದ ಮಟ್ಟಿಗೆ ಬಹಳ ಹಿಂದುಳಿದಿದೆ ಎಂದೇ ಹೇಳಬಹುದಾಗಿದೆ.

ದುಬೈ, ಸಿಂಗಾಪುರ, ಮಲೇಶಿಯಾ ಇತ್ಯಾದಿ ದೇಶಗಳೂ ತಮ್ಮನ್ನು ವಿದೇಶೀ ವಿನಿಮಯ ಗಳಿಕೆಯ ಗಣನೀಯ ಭಾಗವನ್ನು ಪ್ರವಾಸೋದ್ಯಮದಿಂದಲೇ ಪಡೆಯುತ್ತಿರುವುದನ್ನೂ ನಾವು ತಿಳಿದಿದ್ದೇವೆ.

ಗೋವಾ, ಕೇರಳ, ಸಿಕ್ಕಿಮ್ ಮುಂತಾದ ರಾಜ್ಯಗಳಲ್ಲಿ ಮೂಲಸೌಲಭ್ಯಗಳ ವ್ಯವಸ್ಥೆಯೇ ಪ್ರವಾಸೋದ್ಯಮದ ಜೀವಾಳವಾಗಿರುವುದನ್ನು ನಾವು ಕಾಣುತ್ತೇವೆ. ಇದರಲ್ಲಿ ಅಪವಾದಗಳು ಇದ್ದರೂ ಇರಬಹುದು. ನಾವು ನಮ್ಮ ರಾಜ್ಯದ ಪ್ರವಾಸೋದ್ಯಮದ ಬಗ್ಗೆ ಮಾತನಾಡೋಣ. ನಮ್ಮ ರಾಜ್ಯದಲ್ಲಿ ಅನೇಕ ಪ್ರವಾಸಿ ಆಕರ್ಷಣೆಯ, ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳಗಳು ಇವೆ ಎಂಬುದು ಸರ್ವವೇದ್ಯ. ಆದರೆ ಮೂಲ ಸೌಲಭ್ಯಗಳ ಕೊರತೆಯೇ ಪ್ರವಾಸೋದ್ಯಮದ ಹಿನ್ನಡೆಗೆ ಕಾರಣವಾಗಿರುವುದು ನಿರಾಕರಿಸಲಾಗದ ಸಂಗತಿ.

ರಸ್ತೆ, ಸಾರಿಗೆ ಇತ್ಯಾದಿಗಳು ರಾಜಕೀಯ ಇಚ್ಛಾಶಕ್ತಿಯಿಂದಷ್ಟೇ ಸಾಧಿಸಲ್ಪಡಬಹುದು. ಭ್ರಷ್ಟ ವ್ಯವಸ್ಥೆಯು ಸರಿಹೋಗದೆ ಆ ವಿಷಯದಲ್ಲಿ ಸುಧಾರಣೆಯನ್ನು ನಾವು ನಿರೀಕ್ಷಿಸುವುದು ಸಾಧ್ಯವಿಲ್ಲ. ಆದರೆ.. ..

ಊಟೋಪಹಾರ ಮತ್ತು ವಸತಿ ವ್ಯವಸ್ಥೆಯ ವಿಷಯದಲ್ಲಿ ಸುಧಾರಣೆ ಮಾಡಿಕೊಳ್ಳಲು ಅವಕಾಶವಿದೆ. ಬಹುತೇಕ ಪ್ರಮುಖ ಐತಿಹಾಸಿಕ ಮತ್ತು ಪ್ರವಾಸಿ ಕೇಂದ್ರಗಳಲ್ಲಿ ಸರಕಾರೀ ಸ್ವಾಮ್ಯದ ಮಯೂರ ಹೋಟೆಲು ಸಮೂಹವು ವಾಣಿಜ್ಯ ಕಟ್ಟಡಗಳನ್ನು ಹೊಂದಿದ್ದು, ಇದರಲ್ಲಿ ಪ್ರವಾಸಿಗರಿಗಾಗಿ ಊಟೋಪಹಾರ ಮಂದಿರಗಳನ್ನು ನಡೆಸಲಾಗುತ್ತಿದೆ. ಆದರೆ ವೃತ್ತಿಪರರಲ್ಲದ ವ್ಯಕ್ತಿಗಳು ಹೋಟೆಲು ನಡೆಸಿದರೆ ಜನರಿಗೆ ಉತ್ತಮ ಸೇವೆ ನೀಡಲಾಗುವುದಿಲ್ಲ ಎಂಬುದು ಈ ಹೋಟೆಲುಗಳನ್ನು ನೋಡಿದಾಗ ತಿಳಿಯುತ್ತದೆ.

ಇಂತಹ ಹೋಟೆಲುಳನ್ನು ನಡೆಸುವುದಕ್ಕೆ ಸರಕಾರಿ ಮಟ್ಟದಲ್ಲಿ ಟೆಂಡರ್ ಕರೆದು ಗುತ್ತಿಗೆ ನೀಡುವ ಪರಿಪಾಠವಿದ್ದು, ಈ ವೇಳೆ ರಾಜಕೀಯ ಲಾಬಿ ನಡೆಸಿ ಟೆಂಡರ್ ಸಲ್ಲಿಸಿ ಗುತ್ತಿಗೆ ಪಡೆಯುವ ರಾಜಕೀಯ ಮುಖಂಡರ ಹಿಂಬಾಲಕರಿಗೆ ಹೋಟೆಲು ಉದ್ಯಮದಲ್ಲಿ ಯಾವುದೇ ಅನುಭವ ಇರುವುದಿಲ್ಲ. ಗುತ್ತಿಗೆ ಪಡೆದ ಬಳಿಕ ಅವರು ತಮ್ಮ ಬಂಧುಬಳಗದ ಯಾರಿಗಾದರೂ ಪ್ರತಿ ತಿಂಗಳ ಕಮಿಷನ್ ಆಧಾರದಲ್ಲಿ ಮರುಗುತ್ತಿಗೆ ನೀಡುತ್ತಾರೆ. ಒಬ್ಬರ ಹೆಸರಿನಲ್ಲಿ ಇನ್ನೊಬ್ಬರು ಹೋಟೆಲು ನಡೆಸುತ್ತಾರೆ. ಇಲ್ಲಿ ಹೋಟೆಲು ನಡೆಸುವವರು ಸರಕಾರಕ್ಕೆ ಬಾಡಿಗೆ ಪಾವತಿಸಬೇಕು. ತಮಗೆ ಗುತ್ತಿಗೆ ನೀಡಿದವರಿಗೆ ಕಮಿಷನ್ ನೀಡಬೇಕು. ವೆಚ್ಚವನ್ನು ನಿಭಾಯಿಸಿ ತಮಗೊಂದಿಷ್ಟು ಲಾಭವನ್ನೂ ಉಳಿಸಿಕೊಳ್ಳಬೇಕು. ಹೀಗಾಗುವಾಗ ಅನುಭವದ ಕೊರತೆ ಕೈಕೊಟ್ಟರೆ ಹೋಟೆಲಿನ ಸೇವೆಯ ಗುಣಮಟ್ಟ ಕಡಿಮೆಯಾಗುತ್ತಿದೆ. ಇದನ್ನು ಒಮ್ಮೆ ಅನುಭವಿಸಿದ ಪ್ರವಾಸಿಗರು ಮತ್ತೆ ಅಂತಹ ಹೋಟೆಲುಗಳ ಕಡೆಗೆ ತಲೆ ಹಾಕಲಾರರು. ಪ್ರವಾಸೋದ್ಯಮ ಉಳಿಯುವುದು ಹೇಗೆ? ಬೆಳೆಯುವುದು ಹೇಗೆ?

ಇದರ ಬದಲಾಗಿ ಇಂತಹ ಹೋಟೆಲುಗಳನ್ನು ಅನುಭವಿ ಹೋಟೆಲು ಉದ್ಯಮದಾರರಿಗೆ ನೀಡಿದಲ್ಲಿ ಪ್ರವಾಸಿಗರಿಗೆ ಉತ್ತಮ ಊಟೋಪಹಾರ ಮತ್ತು ವಸತಿ ಸೌಲಭ್ಯಗಳನ್ನು ಒದಗಿಸಬಹುದಾಗಿದೆ.

## ಪ್ರವಾಸೋದ್ಯಮ ಸಚಿವರ ಭೇಟಿ

ಬೇರೆ ಬೇರೆ ಜಿಲ್ಲಾ ಮತ್ತು ತಾಲ್ಲೂಕು ಹೋಟೆಲು ಸಂಘಗಳ ಪದಾಧಿಕಾರಿಗಳು ನನ್ನನ್ನು ದೂರವಾಣಿ ಮೂಲಕ ಸಂಪರ್ಕಿಸಿ ತಮ್ಮ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ರಾತ್ರಿ 10 ಗಂಟೆಯ ನಂತರ ಹೊಟೆಲ್ ತೆರೆಯಲು ಪೋಲಿಸ್‌ರು ಅನುಮತಿ ನೀಡುತ್ತಿಲ್ಲ, ಬೆಂಗಳೂರು ನಗರದಂತೆ ರಾತ್ರಿ 1 ಗಂಟೆಯ ವರೆಗೆ ಅಥವಾ 24 ಗಂಟೆಗಳ ಕಾಲ ವ್ಯಾಪಾರ ನಡೆಸಲು ಹೋಟೆಲುಗಳಿಗೆ ಅನುಮತಿ ಒದಗಿಸುವಂತೆ ವಿನಂತಿಸಿದ್ದರು. ಇತ್ತೀಚೆಗೆ ಎಫ್‌ಕೆಸಿಸಿಐ ಕಾರ್ಯಾಲಯಕ್ಕೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಪ್ರವಾಸೋದ್ಯಮ ಸಚಿವರು ಶ್ರೀ ಸಿ.ಟಿ. ರವಿಯವರು ಆಗಮಿಸಿದ್ದು ಈ ವಿಚಾರವಾಗಿ ಮುಕ್ತ ಚರ್ಚೆ ಮಾಡಲಾಯಿತು. ಅದಕ್ಕೆ ಉತ್ತರಿಸಿದ ಸಚಿವರು ಬೆಂಗಳೂರು ಹೊರತು ಪಡಿಸಿ ಬೇರೆ ಜಿಲ್ಲಾ ಮತ್ತು ತಾಲ್ಲೂಕು ಪ್ರದೇಶಗಳಲ್ಲಿ ಅಲ್ಲಿಯ ಸ್ಥಳೀಯ ಜನರು ರಾತ್ರಿ 10 ಗಂಟೆಯ ಒಳಗೆ ಮಲಗುತ್ತಾರೆ ತದನಂತರ ರಾತ್ರಿ 10 ಗಂಟೆಯ ನಂತರ ಹೋಟೆಲು ತೆರೆದರೆ ವ್ಯಾಪಾರಕ್ಕೆ ಅವಕಾಶವಿರುವುದಿಲ್ಲವೆಂದು ಹಾರಿಕೆಯ ಉತ್ತರ ನೀಡಿದರು.ಅದಕ್ಕೆ ನಾನು, ಅಂದರೆ ಪ್ರವಾಸೋದ್ಯಮ ಕೇಂದ್ರಗಳಿಗೆ ಬರುವ ಪ್ರವಾಸಿಗರು ಸ್ಥಳವನ್ನು ತಲುಪುವ ವೇಳೆ ಹತ್ತು ಗಂಟೆ ಕಳೆದರೆ ನಂತರ ಊಟಕ್ಕಾಗಿ ಬೀದಿ ಬದಿಯ ತಿಂಡಿಗಾಡಿಗಳನ್ನೇ ಆಶ್ರಯಿಸಬೇಕೇ? ಎಂದು ಪ್ರಶ್ನಿಸಿದೆ.
ಆ ವಿಷಯಕ್ಕೆ ಸಚಿವರು ಉತ್ತರಿಸದೇ ಸುಮ್ಮನಾದರು ಈ ವಿಚಾರವಾಗಿ ನಾವು ಮುಂದಿನ ದಿನಗಳಲ್ಲಿ ಸರ್ಕಾರಕ್ಕೆ ನಮ್ಮ ಮನವಿಯನ್ನು ಸಲ್ಲಿಸಿ ಪ್ರಯತ್ನಗಳು ಮುಂದುವರೆಸೋಣ.



ಚಿತ್ರ: ಶಿವಶಂಕರ ಬಣಗಾರ

ಸರಕಾರಿ ಸ್ವಾಮ್ಯದ ಹೋಟೆಲು, ವಸತಿಗೃಹಗಳನ್ನು ಗುತ್ತಿಗೆ ನೀಡುವ ಸಂದರ್ಭದಲ್ಲಿ ಯಾರು ಹೆಚ್ಚು ಟೆಂಡರ್ ಸಲ್ಲಿಸುತ್ತಾರೆ ಎಂಬುದಕ್ಕಿಂತ ಯಾರು ಉತ್ತಮ ಸೇವೆ ಸಲ್ಲಿಸುತ್ತಾರೆ ಎಂಬುದನ್ನೇ ಮಾನದಂಡವಾಗಿಟ್ಟುಕೊಂಡು, ಈಗ ಹೋಟೆಲು ಉದ್ಯಮಕ್ಷೇತ್ರದಲ್ಲಿ ಹೋಟೆಲು ಸಮೂಹಗಳನ್ನು ಯಶಸ್ವಿಯಾಗಿ ನಡೆಸುತ್ತಿರುವ ಉದ್ಯಮದಾರರ ಜತೆ ಮಾತುಕತೆ ನಡೆಸಿ ಉತ್ತಮ ಊಟೋಪಹಾರ ಮತ್ತು ಸೇವೆ ಒದಗಿಸುವ ಷರತ್ತಿನೊಂದಿಗೆ ಗುತ್ತಿಗೆ ನೀಡಿದಲ್ಲಿ ಪ್ರವಾಸೀ ಕೇಂದ್ರಗಳತ್ತ ಜನರನ್ನು ಪ್ರವಾಸೋದ್ಯಮ ಆಕರ್ಷಿಸಬಹುದಾಗಿದೆ.

ಪ್ರವಾಸೋದ್ಯಮ ಬೆಳೆದಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಆಗಮಿಸುವ ಪ್ರವಾಸಿಗರು ಪ್ರವಾಸಿ ಕೇಂದ್ರಗಳಲ್ಲಿರುವ ವಸತಿಗೃಹಗಳಲ್ಲಿ ಉಳಿದು ಹೋಟೆಲುಗಳಿಗೆ ವ್ಯಾಪಾರ ಕಲ್ಪಿಸುತ್ತಾರೆನ್ನುವುದು ಒಂದು ದೃಷ್ಟಿಯಾದರೆ, ಅಂತಹ ಪ್ರವಾಸಿಗರು ಪ್ರವಾಸಿತಾಣಗಳಲ್ಲಿ ಬದುಕು ಕಟ್ಟಿಕೊಂಡಿರುವ ಬೀದಿಬದಿಯ ಬಾಳೆಹಣ್ಣು, ಕಡ್ಲೆಪುರಿ ಮಾರಾಟಗಾರರು, ಗೊಂಬೆ, ಬಲೂನ್ ಮಾರಾಟಗಾರರು, ಬಟ್ಟೆ ವ್ಯಾಪಾರಿಗಳು, ಹೀಗೆ ಬೇರೆ ಬೇರೆ ರೀತಿಯಲ್ಲಿ ನೆಲೆಗೊಂಡಿರುವ ಜನರಲ್ಲಿ ವ್ಯಾಪಾರ ಮಾಡುವ ಮೂಲಕ ಅವರ ಜೀವನೋಪಾಯಕ್ಕೆ ಆಧಾರವಾಗುತ್ತಾರೆ. ಅಂತಹ ಬಡವರ ನೆರವಿಗಾಗಿಯೂ ಪ್ರವಸೋದ್ಯಮದ ಅಭಿವೃದ್ಧಿ ಬಹಳ ಅಗತ್ಯ ಎಂದು ಕೆಪಿಹೆಚ್‌ಆರ್‌ಎಯ ನಿಕಟಪೂರ್ವ ಅಧ್ಯಕ್ಷ ಶ್ರೀ ಎಂ. ರಾಜೇಂದ್ರ ಅವರು ಆಗಾಗ ಹೇಳುತ್ತಿದ್ದುದನ್ನು ಇಲ್ಲಿ ಉಲ್ಲೇಖಿಸಬಹುದು.

ಎಲ್ಲ ಜಿಲ್ಲೆಗಳಲ್ಲೂ ಹೋಟೆಲು ಉದ್ಯಮದಾರರ ಸಂಘಟನೆಗಳಿದ್ದು, ರಾಜ್ಯಮಟ್ಟದಲ್ಲಿಯೂ ಕರ್ನಾಟಕ ಪ್ರದೇಶ ಹೋಟೆಲು ಮತ್ತು ಉಪಾಹಾರ ಮಂದಿರಗಳ ಸಂಘವು ಹತ್ತಾರು ವರ್ಷಗಳಿಂದ ಹೋಟೆಲು ಉದ್ಯಮದ ಹಿತರಕ್ಷಣೆಗಾಗಿ ಮತ್ತು ಪ್ರಗತಿಗಾಗಿ ಕೆಲಸ ಮಾಡುತ್ತಿದೆ. ಇಂತಹ ಹೋಟೆಲು ಉದ್ಯಮ ಸಂಘಟನೆಗಳ ಮುಂದಾಳುಗಳೊಂದಿಗೆ ಸರಕಾರದ ಪ್ರಮುಖರು ಮತ್ತು ಪ್ರವಾಸೋದ್ಯಮ ಇಲಾಖೆಯ ಮಂತ್ರಿಗಳು, ಅಧಿಕಾರಿಗಳು ವಿಚಾರ ವಿನಿಮಯ ನಡೆಸಿ ಸಮಾಜದಲ್ಲಿ ಹೆಸರು ಮಾಡಿದ ಜನಪ್ರಿಯ ಹೋಟೆಲು ಸಮೂಹಗಳ ಮಾಲೀಕರಿಗೆ ಇಂತಹ ಹೋಟೆಲುಗಳ ನಿರ್ವಹಣೆಯ ಹೊಣೆಯನ್ನು ನೀಡಿದರೆ ಹೋಟೆಲು ಉದ್ಯಮ ಮತ್ತು ಪ್ರವಾಸೋದ್ಯಮ ಪರಸ್ಪರ ಪೂರಕವಾಗಿ ಬೆಳವಣಿಗೆ ಸಾಧಿಸುವುದು ಸಾಧ್ಯವಿದೆ.

# J.S. ASSOCIATES




**Distributors For:**

- Fuel gel 12 kg and 200 gm TIN
- Aluminium foil and containers
- Food grade paper containers
- All disposable items

**CONTACT**

# 1616, (Old No. 84), 3rd Block,
8th Main. Jayanagar, Bangalore -11
Email: js.associates8@yahoo.com

**+91 9343978993 | +91 7406776742**

ಜಾಹೀರಾತು

ECO friendly
100% Natural

We manufacture Cloth Carry bags of all Sizes and types.

For Orders and more details:

## Nisarga Bags

# 232, 4th main, NGEF Layout,
Nagarabhavi, Bangalore – 560072

prpventures1@gmail.com

+91- 9739969992
+91- 9739969991




We are the leading suppliers for all Restaurants, Supermarkets etc.

ಜಾಹೀರಾತು

ಶುಭಾಶಯಗಳೊಂದಿಗೆ

ಜಾಹೀರಾತು



# ಹೋಟೆಲ್ ದ್ವಾರಕಾ

ಆನಂದರಾವ್ ಸರ್ಕಲ್, ಬೆಂಗಳೂರು–560 009

ಉದ್ಯಾನ ನಗರಿಯ ಮಧ್ಯದಲ್ಲಿ ಹೆಸರಾಂತ ಆನಂದರಾವ್ ವೃತ್ತದ ಅಂಚಿನಲ್ಲಿ ರೈಲ್ವೆ, ಸಾರಿಗೆ ನಿಲ್ದಾಣಗಳ ಸಮೀಪದಲ್ಲಿ, ವಿವಿಧ ಕಛೇರಿ, ಕೋರ್ಟುಗಳ ಸನಿಹದಲ್ಲಿ ವ್ಯಾಪಾರ ವಹಿವಾಟು ಕೇಂದ್ರಗಳ ಸಾನಿಧ್ಯದಲ್ಲಿ ರಾರಾಜಿಸುವ ನಿಮ್ಮ ಕುಟುಂಬದವರ ಅಚ್ಚುಮೆಚ್ಚಿನ ಮೆಚ್ಚುಗೆಯ ವಸತಿ ಗೃಹ.

**ನಮ್ಮ ವಿಶೇಷತೆಗಳು**

ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ–ಬೆಳಕಿರುವ, ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ, ನೆಮ್ಮದಿ ತರುವ ಶಾಂತ ವಾತಾವರಣ, ನಮ್ರತೆಯ ಸೇವೆ ಎಸ್.ಟಿ.ಡಿ. / ಐ.ಎಸ್.ಡಿ. ಮತ್ತು ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ......

ಎನ್.ಆರ್. ನಾರಾಯಣರಾವ್
ಮೇನೆಜಿಂಗ್ ಡೈರೆಕ್ಟರ್

ದೂರವಾಣಿ : 22265011 (8 ಮಾರ್ಗಗಳು) 2226 8263, 2226 8264

# Prevention: Remember the OLD saying – Prevention Is Better Than Cure



● **DP Shankar**
Security Design & Consultation
Disaster Management &
Team Building - Training Programs
Brand Advisory & Consultations
**+91 9844013789**
**shankardp@gmail.com**

There is currently no vaccine to prevent coronavirus disease 2019 (COVID-19). The best way to prevent illness is to avoid being exposed to this virus. However, as a reminder, WHO always recommends everyday preventive actions to help prevent the spread of respiratory diseases, including:

- Avoid close contact with people who are sick.
- Avoid touching your eyes, nose, and mouth.
- Stay home when you are sick.
- Cover your cough or sneeze with a tissue, then throw the tissue in the trash.
- Clean and disinfect frequently touched objects and surfaces using a regular household cleaning spray or wipe.
- Follow WHO recommendations for using a facemask.

  o WHO does not recommend that people who are well wear a facemask to protect themselves from respiratory diseases, including COVID-19.

  o Facemasks should be used by people who show symptoms of COVID-19 to help prevent the spread of the disease to others. The use of facemasks is also crucial for health workers and people who are taking care of someone in close settings (at home or in a health care facility).
- Wash your hands often with soap and water for at least 20 seconds, especially after going to the bathroom; before eating; and after blowing your nose, coughing, or sneezing.

  o If soap and water are not readily available, use an alcohol-based hand sanitizer with at least 60% alcohol. Always wash hands with soap and water if hands are visibly dirty.

Stay informed and follow advice given by your healthcare provider

Stay informed on the latest developments about COVID-19. Follow advice given by your healthcare provider, your national and local public health authority or your employer on how to protect yourself and others from COVID-19.

Why? National, State and Local authorities will have the most up to date information on whether COVID-19 is spreading in your area. They are best placed to advise on what people in your area should be doing to protect themselves.

Please visit for more information:

https://www.who.int/emergencies/diseases/novel-coronavirus-2019/advice-for-public

# Hotel Industry requirements



Our Industry contribution 9% to GDP growth. We provide good number of employment particularly to uneducated people. Further we also support farmers by purchasing like vagetables, milk, fruits, pulses etc. Common facilities like drinking water & toilets is provided free of cost to general public & tourists by our Hoteliers. For the growth of our industry following matter to be discuses and to be resolve.

## 1) EASE OF MAKING BUSINESS

All license like trade, shop & establishment, FSSAI, Pollution Control board etc to be made one time without yearly renewals.

## 2) EPF, ESIC & MINIMUM WAGES

All new Hotels employer contribution of EPF & ESIC to be reimbursed by the Government for the first five years. State wise minimum wages to be continued

## 3) TAXES

GST rate for COT to be reduced to 2% and rental GST to be reduced to 12%

## 4) LIQUOR LICENSE

This is to be simplified & fees to be reduced.

## 5) TOURISM

Road connectivity to be improved. All tourists centres to be uplifted as per international standards. Additional special benefits to be given for hotel industry at tourists place as business in these places will be only on weekends.

We have represent all the above matter with the state and central government

# ಸಮರ್ಥ ನಾಯಕತ್ವದಲ್ಲಿ ಮಾದರಿ ಸಂಘವಾಗಿ ಮೂಡಿ ಬಂತು ಬಿಬಿಹೆಚ್ಎ



• ಗೋಪಿನಾಥ ಪ್ರಭು

ಕಳೆದ ಒಂದೂವರೆ ವರ್ಷದಲ್ಲಿ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದಲ್ಲಿ ಹೊಸಗಾಳಿ ಬೀಸಿದಂತೇ ಹೇಳಬಹುದು. ಕಳೆದ 84 ವರ್ಷಗಳಲ್ಲೇ ಅತ್ಯಧಿಕ ವೇಗವಾಗಿ ಸಂಘಟನಾ ಸಾಧನೆಯನ್ನು ದಾಖಲಿಸಿದ ವರ್ಷ ಇದೆಂದರೆ ಅತಿಶಯವಾಗುವುದಿಲ್ಲ. ಡೈನಾಮಿಕ್ ಅಧ್ಯಕ್ಷರಾದ ಶ್ರೀ ಪಿ ಸಿ ರಾವ್ ಅವರ ನೇತೃತ್ವದಲ್ಲಿ ಸಂಘವು ಹೊಸ ಆಯಾಮವನ್ನು ಪಡೆಯಿತು. ಇಂತಹ ಬೆಳವಣಿಗೆಯ ಹಾದಿಯಲ್ಲಿ ಅವರಿಗೆ ಬೆಂಬಲವಾಗಿ ನಿಂತ ಪದಾಧಿಕಾರಿಗಳನ್ನು ಮರೆಯುವಂತಿಲ್ಲ ಅಧ್ಯಕ್ಷರ ನಂತರದ ಪ್ರಮುಖ ಹುದ್ದೆಗಳಾದ ಕಾರ್ಯಕಾರಿ ಮತ್ತು ಖಜಾಂಚಿಗಳಾದ ಶ್ರೀ ಸುಬ್ರಹ್ಮಣ್ಯ ಹೊಳ್ಳ ಹಾಗೂ ಶ್ರೀ ವೀರೇಂದ್ರ ಕಾಮತ್‌ರು ಪಿ ಸಿ ರಾಯರಿಗೆ ಹೆಗಲೇರಿ ನಿರಂತರವಾಗಿ ನಿಂತಿದ್ದರು ಎಂಬುದು ಗಮನೀಯ. ಸಂಘದ ಸಭೆಗಳಲ್ಲಿ ಕಾರ್ಯಕ್ರಮಗಳಲ್ಲಿ, ಅಧಿಕಾರಿಗಳ ಭೇಟಿಯಲ್ಲಿ, ಸಚಿವರೊಂದಿಗಿನ ಮಾತುಕತೆಗಳಲ್ಲಿ ವಿವಿಧೆಡೆಗಳ ಪ್ರವಾಸ ಮತ್ತು ಪ್ರಯಾಣಗಳಲ್ಲಿ ಈ ಮೂವರು ತ್ರಿಮೂರ್ತಿಗಳು ಜತೆಯಾಗಿದ್ದು ಸಂಘವನ್ನು ಒಂದು ಎತ್ತರಕ್ಕೆ ಮುಟ್ಟಿಸುವಲ್ಲಿ ಯಶಸ್ಸು ಪಡೆದಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ.

ಈ ಹಿಂದಿನ ಅಧ್ಯಕ್ಷರು, ಮುಖಂಡರು ಮತ್ತು ಹಿಂದೆ ಸಂಘವನ್ನು ಮುನ್ನಡೆಸಿದವರು ಏನೇನೂ ಸಾಧನೆಯನ್ನು ಮಾಡಲೇ ಇಲ್ಲ ಎಂದೇನೂ ನಾನು ಹೇಳುತ್ತಿಲ್ಲ. ಹಿಂದಿನವರು ಹಾಕಿಟ್ಟ ಅಸ್ತಿವಾರದ ಮೇಲೆ ಬಹು ಭದ್ರವಾದ ಕಟ್ಟಡವನ್ನೇ ಕಟ್ಟಿ ನಿಲ್ಲಿಸಿದ್ದಾರೆ ಈ ಮೂರು ಮಂದಿ. ಈ ಮೂವರಲ್ಲಿ ಒಬ್ಬರ ಹಾಡಿಗೆ ಇನ್ನೊಬ್ಬರ ಮ್ಯೂಸಿಕ್ ಟ್ಯೂನ್ ಬಹಳವಾಗಿ ಹೊಂದಿಕೊಳ್ಳುವ ಗಾಯನ ತಂಡದ ಹಾಗೆ ಈ ಮೂವರು ಸಂಘದ ಕೆಲಸವನ್ನು ಮಾಡಿದ್ದಾರೆ.

ಇತ್ತೀಚೆಗಿನ ಹತ್ತು ಹದಿನೈದು ವರ್ಷಗಳಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಹೆಬ್ಬಾರರು ಮತ್ತು ಶ್ರೀ ವಾಸುದೇವ ಅಡಿಗರು ಸಂಘಟನೆಯನ್ನು ಬೆಳೆಸುವಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ ಆದರೆ ಅವರಿಗೆ ಸಂಘದ ಕೆಲಸಕ್ಕೆ ಸಾಕಷ್ಟು ಸಮಯ ಸಿಗುತ್ತಿರಲಿಲ್ಲವೋ, ತಮ್ಮ ಸ್ವಂತ ಉದ್ಯಮಗಳ ಒತ್ತಡವೋ ಅಥವಾ ಸರಿಯಾದ ಕೊ.ಪದಾಧಿಕಾರಿಗಳ ಸಹಕಾರ ಬೆಂಬಲಗಳು ಸಿಗದೆಯೋ ಇಂದಿನ ವೇಗದಲ್ಲಿ ಕೆಲಸ ಮಾಡಿದ್ದು ಕಾಣಲಿಲ್ಲ. ಆದರೆ ಇಂದು ಮುಂದಾಳ್ತನ ವಹಿಸಿದ ತಂಡವು ಕೆಲಸ ಮಾಡುತ್ತಿರುವುದು ಕಂಡರೆ ಅದು ಜಾಗತೀಕರಣ ಮತ್ತು ಡಿಜಿಟಲೀಕರಣದ ವೇಗಕ್ಕೆ ಸ್ಪಂದಿಸುವ ರೀತಿಯಲ್ಲಿ ಮುನ್ನಡೆಯುತ್ತದೆ ಅಥವಾ ಓಡುತ್ತಿದೆ ಎಂದೇ ಹೇಳಬಹುದು.

ಶ್ರೀ ಹೆಬ್ಬಾರರು ಮತ್ತು ಶ್ರೀ ಅಡಿಗರು ತಮಗಿಂತ ಹಿಂದಿನ ಹಿರಿಯ ಅಧ್ಯಕ್ಷರುಗಳು ಕಟ್ಟಿ ಬೆಳೆಸಿದ ಸಂಘಕ್ಕೆ ಸುಬದ್ರವಾದ ಅಡಿಪಾಯ ಹಾಕಿದರು. ಹೆಬ್ಬಾರರ ಕಾಲದಲ್ಲಿ ಸಂಘಕ್ಕೆ ಚಾಮರಾಜಪೇಟೆಯ ಕೆ.ಆರ್ ರಸ್ತೆಯಲ್ಲಿ ಪ್ರತಿಷ್ಠಿತ ಜಾಗದಲ್ಲಿ ಸ್ವಂತ ಕಟ್ಟಡವಾಯಿತು. ಶ್ರೀ ವಾಸುದೇವ ಅಡಿಗರ ಕಾಲದಲ್ಲಿ ಹಾರೋಹಳ್ಳಿಯ ಕೆಐಎಡಿಬಿ ನಿವೇಶನವು ಮಂಜೂರಾಯಿತು. ಅದಕ್ಕೆ ಸಂಬಂಧಿಸಿದಂತೆ ಶ್ರೀ ಚಂದ್ರಶೇಖರ ಹೆಬ್ಬಾರರವರು ತಮ್ಮ ಅವಧಿಯಲ್ಲಿ ಸಂಪನ್ಮೂಲ ಕೂಡಿಕರಣ ಮಾಡಿ 30 ಲಕ್ಷ ರೂಪಾಯಿಗಳನ್ನು ಪಾವತಿಸಿದ್ದಾಯಿತು. ಆದರೂ ಹಾರೋಹಳ್ಳಿ ಸ್ಥಳೀಯ ರೈತರ ವಿರೋಧ ಮತ್ತಿತರ ಕಾನೂನು ಪ್ರಕ್ರಿಯೆಗಳ ಕಾರಣದಿಂದ ನಿವೇಶನವು ಸಂಘಕ್ಕೆ ಹಸ್ತಾಂತರವಾಗಲಿಲ್ಲ.

ಈಗಿನ ಅಧ್ಯಕ್ಷರಾದ ಪಿ ಸಿ ರಾಯರು (ಛಲಬಿಡದ ತ್ರಿವಿಕ್ರಮ) ಕಳೆದ ಒಂದೂವರೆ ವರ್ಷದ ತಮ್ಮ ಆಡಳಿತಾವಧಿಯಲ್ಲಿ ಸಾಕಷ್ಟು ಸಮಯವನ್ನು ಸಂಘದ ಕೆಲಸಗಳಿಗೆ ಮಿಸಲಿಟ್ಟು ಹತ್ತಾರು ಬಾರಿ ಕೆಐಎಡಿಬಿ ಕಚೇರಿಗೆ ಎಡತಾಕಿ ಪದೇ ಪದೇ ಅಧಿಕಾರಿಗಳಿಗೆ ಕಿರುಕುಳ

ಕೊಟ್ಟು ನಿವೇಶನದ ಕಬ್ಜೇಯನ್ನು ಪಡೆಯುವಲ್ಲಿ ಯಶಸ್ಸು ಸಾಧಿಸಿದ್ದಾರೆ.

ಈಗ ಪಡೆದ ನಿವೇಶನಕ್ಕೆ ಬೇಲಿ ಹಾಕಿ ಭದ್ರಗೊಳಿಸುವ ಕೆಲಸ ನಡೆಯುತ್ತಿದೆ ಎಂಬುವುದು ನಮಗೆ ವಾಟ್ಸ್ ಅಪ್ ಸುದ್ದಿಗಳಿಂದ ಗೊತ್ತಾಗಿದೆ. ಸಂಘದ ಪ್ರತಿಯೊಂದು ಕಾರ್ಯಚಟುವಟಿಕೆಯ ಮಾಹಿತಿಯನ್ನು ಅಂತರ್ಜಾಲದ ಮಾಧ್ಯಮದ ಮೂಲಕ ನಿತ್ಯ ನಿರಂತರವೆಂಬಂತೆ ಹಂಚಿಕೊಳ್ಳುತ್ತಿರುವುದು ಪಿ ಸಿ ರಾಯರ ಮತ್ತೊಂದು ಹೆಗ್ಗಳಿಕೆ. ಹೋಟೆಲು ಉದ್ಯಮಕ್ಕೆ ಸಂಬಂಧಿಸಿದ ಯಾವುದೇ ಆಡಳಿತಾತ್ಮಕ ಬೆಳವಣಿಗೆಗಳು, ತೆರಿಗೆ, ಆವಿಷ್ಕಾರ ಮುಂತಾದ ಗಮನ ಸೆಳೆಯುವ ಉಪಯುಕ್ತ ಸುದ್ದಿಗಳನ್ನು ಅವರು ಆಯಾ ದಿನವೇ ವಾಟ್ಸ್ ಅಪ್ ಮೂಲಕ ಸಂಘದ ಸದಸ್ಯರಿಗೆಲ್ಲ ತಿಳಿಸುತ್ತಿದ್ದಾರೆ. ಅವರ ಈ ನಡೆಯನ್ನು ಅನುಸರಿಸುವ ಒಂದು ಪಡೆಯೇ ಅವರೊಂದಿಗಿದೆ ಎಂದರೆ ಇನ್ನೂ ಸರಿಯಾಗುತ್ತದೆ. ಖಜಾಂಚಿ ಶ್ರೀ ವೀರೇಂದ್ರ ಕಾಮತ್, ಪ್ರಿಯದರ್ಶಿನಿಯ ಶ್ರೀ ರಾಕೇಶ ಅಲ್ಸೆ ಮತ್ತು ವಿದ್ಯಾರ್ಥಿ ಭವನದ ಶ್ರೀ ಅರುಣ ಅಡಿಗರಂತಹ ಹಲವು ಯುವ ಮನಸ್ಸಿನ (ಸಕ್ರಿಯರಾಗಿರುವರೆಲ್ಲ ಯುವ ಮನಸ್ಸಿನವರು) ಉದ್ಯಮದಾರರು ಅನೇಕ ಮಾಹಿತಿಗಳನ್ನು ನಮಗೆ ತಿಳಿಯಪಡಿಸುತ್ತಲೇ ಇರುವುದು ಉದ್ಯಮ ಕ್ಷೇತ್ರದ ಬೆಳವಣಿಗೆಗಳನ್ನು ಕಾಲಕಾಲಕ್ಕೆ ತಿಳಿಯಲು ಸಹಾಯಕವಾಗಿದೆ. ಅಲ್ಲದೆ ಸಂಘದ ಚಟುವಟಿಕೆಗಳು ನಮಗೆ ಗೊತ್ತಾಗಿತ್ತದೆ ಇತರ ಸದಸ್ಯ ಬಂಧುಗಳೂ ಪಿ ಸಿ ರಾಯರಿಗೆ ಬೆಂಬಲ ನೀಡಿರುವುದು ಅಭಿನಂದನೀಯ.

ಅಧ್ಯಕ್ಷರು ಪ್ರತಿ ಸಭೆಯಲ್ಲಿ ತಮ್ಮ ಸದಸ್ಯರಿಗೆ ಹೇಳುವುದೆನೆಂದರೆ ಸಂಘಕ್ಕೆ ಮಾಸಿಕ ದೇಣಿಗೆ ಬಿಟ್ಟು ಯಾವುದೇ ಹಣ ಬೇಡ ನಿಮ್ಮ ನಿಮ್ಮ ಸಮಸ್ಯೆಯನ್ನು ಹೇಳಿ ಎಂದು ಹೇಳುವ ಮಾತು ಎಲ್ಲಾ ಸದಸ್ಯರಿಗೆ ನಾವು ಮಾಡುವ ವ್ಯಾಪರದಲ್ಲಿ ಧೈರ್ಯ ತುಂಬಿಸುತ್ತದೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ಶ್ರೀ ಪಿ.ಸಿ ರಾಯರ ಹೆಗ್ಗಳಿಕೆಯಾಗಿದೆ. ಸಂಘದ ಸದಸ್ಯತ್ವವನ್ನು ಮತ್ತು ವಂತಿಕೆ ಸಂಗ್ರಹವನ್ನು ಹೆಚ್ಚಿಸುವುದರ ಮೂಲಕ ಸಂಘದ ಕಾರ್ಯಕ್ರಮಗಳಿಗೂ ಆರ್ಥಿಕ ಸಂಪನ್ಮೂಲವನ್ನು ಹೊಂಚಬಹುದು ಎಂಬ ಭರವಸೆ ಶ್ರೀ ಪಿ.ಸಿ.ರಾಯರಿಗಿತ್ತು ಮತ್ತು ಅವರು ಅದನ್ನು ಸಾಧಿಸಿ ತೋರಿಸಿದ್ದಾರೆ. ಈ ಒಂದೂವರೆ ವರ್ಷದಲ್ಲಿ ಸಂಘವು ಕೆಲವು ಕಾರ್ಯಕ್ರಮಗಳನ್ನು ಮಾಡಿದೆ. ಕಾನೂನು ಅರಿವು ಕಾರ್ಯಕ್ರಮ, ಮಾಲೀಕರಿಗೆ ಮತ್ತು ಕಾರ್ಮಿಕರಿಗೆ ತರಬೇತಿ, ಅವಾರ್ಡ್ ಕಾರ್ಯಕ್ರಮ, ಜಿಎಸ್‌ಟಿ ಮತ್ತು ಇತರ ಹಲವಾರು ಕಾರ್ಯಕ್ರಮಗಳು ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆದಿವೆ.

ಅದರೊಂದಿಗೆ ಸಂಘದ ಮುಖವಾಣಿಯಾದ ಅತಿಥಿ ದೇವೋಭವ ಮಾಸಪತ್ರಿಕೆಯೂ ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳ ಲೇಖನ ಮತ್ತು ಮಾಹಿತಿಗಳೊಂದಿಗೆ ಸಮೃದ್ಧವಾದ, ವರ್ಣರಂಜಿತವಾಗಿ ಹೊರಬರುತ್ತಿದೆ.

ಸಂಘಕ್ಕಾಗಿ ನೂತನ ಸಾಫ್ಟ್‌ವೇರನ್ನು ಅಭಿವೃದ್ಧಿ ಪಡಿಸಲಾಗಿದ್ದು ಒಂದೆರಡು ತಿಂಗಳುಗಳಲ್ಲಿ ಇದು ಜಾರಿಯಾಗಬಹುದೆಂಬ ನಿರೀಕ್ಷೆಯಿದೆ. ಇಂತಹ ಹಲವು ನಿರೀಕ್ಷೆಗಳನ್ನು ಶ್ರೀ ಪಿ.ಸಿ.ರಾಯರ ವಿಷಯದಲ್ಲಿ ನಾವು ಇರಿಸಿಕೊಳ್ಳಬಹುದಾಗಿದೆ. ಸಂಘದ ಕೆಲಸದ ಬಗ್ಗೆ ಶ್ರೀ ಪಿ.ಸಿ.ರಾಯರಿಗಿರುವ ಬದ್ಧತೆಗೆ ಇನ್ನೊಂದು ನಿದರ್ಶನ ಇಲ್ಲಿದೆ: ಪಾಂಡಿಚೇರಿಗೆ ವೈಯಕ್ತಿಕ ಕೆಲಸಕ್ಕಾಗಿ ಹೋಗಿದ್ದ ವೇಳೆ ಶ್ರೀ ಪಿ.ಸಿ.ರಾಯರು ಅಲ್ಲಿಯೂ ಸಂಘವನ್ನು ನೆನಪಿಸಿಕೊಂಡು ಅಲ್ಲಿಯ ಹೋಟೆಲು ಸಂಘದ ಪದಾಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸಿ ಮಾತುಕತೆ ನಡೆಸಿ ಬಂದಿದ್ದಾರೆ. ಅವರು ಮಾಡಿರುವ ಪಿ.ಆರ್.ಓ ಕೆಲಸದಿಂದಾಗಿ ಇಂದು ಬೃಹತ್

ಬೆಂಗಳೂರು ಹೋಟೆಲುಗಳ ಸಂಘವು ಕೇರಳ, ತಮಿಳನಾಡು, ಪಾಂಡಿಚೇರಿ, ಆಂಧ್ರ, ತೆಲಂಗಾಣ, ಮಹಾರಾಷ್ಟ್ರ, ಗೋವಾ, ಗುಜರಾತ್ ಮತ್ತಿತರ ರಾಜ್ಯಗಳ ಹೋಟೆಲು ಸಂಘಗಳ ಪದಾಧಿಕಾರಿಗಳ ಜತೆ ಸಂವಹನ ನಡೆಸುತ್ತಾ ರಾಷ್ಟ್ರ ಮಟ್ಟದಲ್ಲಿ ಹೋಟೆಲು ಉದ್ಯಮ ಕ್ಷೇತ್ರದ ಮತ್ತು ಪ್ರವಾಸೋದ್ಯಮ ಕ್ಷೇತ್ರದ ಬೆಳವಣಿಗೆಗಳ ಕುರಿತು ಗಮನವಿರಿಸಿದೆ.

ಹೋಟೆಲು ಉದ್ಯಮಕ್ಕೆ ಮತ್ತು ಉದ್ಯಮದಾರರಿಗೆ ಸಮಸ್ಯೆಗಳು ಉದ್ಭವಿಸಿದಾಗ ಸಾಂಘಿಕ ಮತ್ತು ವೈಯಕ್ತಿಕ ನೆರವು ಪರಿಹಾರಗಳನ್ನು ಒದಗಿಸುವಲ್ಲಿಯೂ ಈ ಸಂಘವು ಸಿದ್ಧವಾಗಿದೆ ಎಂಬುದೂ ಹಲವು ಉದಾಹರಣೆಗಳಿಂದ ಸ್ಪಷ್ಟವಾಗಿದೆ. ಸಂಘವು ಇಂತಹ ಕ್ರಿಯಾಶೀಲ ಚಟುವಟಿಗಳನ್ನು ಇನ್ನಷ್ಟು ಹೆಚ್ಚಿಸಿ ಸಮಸ್ತ ಹೋಟೆಲು ಉದ್ಯಮದಾರರ ಮನಗೆಲ್ಲಲಿ ಎಂದು ಆಶಿಸೋಣ, ಶ್ರೀ ಪಿ.ಸಿ.ರಾವ್ (ಪಿ.ಸಿ.ಬಾಹುಬಲಿ ರಾವ್) ಮತ್ತವರ ತಂಡಕ್ಕೆ ಅಭಿನಂದನೆಗಳು.


happymixx®
EASIER - FASTER - RELIABLE
ಹ್ಯಾಪಿಮಿಕ್ಸ್®
IDEAL USAGE FOR
JUICES, MILK SHAKES
SMOOTHIES, LASSI
COFFEE SHOPS, CAFES
LOUNGE BARS
HOTELS &
RESTAURANTS
IDEAL USAGE FOR
RESTAURANTS
HOTELS, CAFES
CATERING
CANTEENS, PG'S
& DOMESTIC USE
COMMERCIAL BLENDER
MODEL NO: CS-1
JUICER MIXER GRINDER
MODEL NO: CS-2
PATENTED DESIGN AND TECHNOLOGY
POWERFUL & MAINTANANCE FREE COMMERCIAL MOTOR
950 W COPPER MOTOR
PATENTED PUSH & PULL LOCKING CONCEPT
PATENTED DESIGN S.S 304 BUSH PLATE
FOOD GRADE SAFE
SHOCK PROOF ABS BODY
PROUDLY MADE IN KARNATAKA-INDIA
Bangalore- BVK Iyengar Road, Prakash Appliances & Spares- 9343714614, 9448394800, Jain wire emporium- 9844731913, E-Kundan- 7892220885, Avinash Metal - 080- 41222111, Sangeeta hotel ware- 9916242244, Chickpet- Saibaba electricals – 9482411210, Avenue Road- Sagar Appliances- 9845550877, JP Nagar- Bhavani electricals – 080 26595613, Rajajinagar – Triveni enterprises- 9113820243, Jayanagar – Vishaals – 080 22447285, Bellary- Manish home appliances – 8147497525, Bhadravathi - Vinayaka Traders - 9901319124, Hubli - Hubli Spares- 9448590373, Gadag - Vinod Electricals – 9035500393, Kundapura - Pooja marketing – 8904821045, Vijayapura - Jain Steel Centre – 9844351499, Tumkur - Royal Agency- 8861424282, Kasargod - Sarayu electricals- 9961945639 | For Institutional enquiry: Manjushree Marketing- 9844152143
PATENT PENDING*
Now Available on Flipkart
MFD BY: MANGALAM INDUSTRIES Rajajinagar, 6th Block, Bangalore-560010
@happymixxindia
info@happymixx.com
www.happymixx.com
+91 988 616 3339

ಜಾಹೀರಾತು

Williams

**Leading Manufacturers of Kitchen Equipment, Display Cabinet and SS Refrigeration**






**WILLIAMS REFRIGERATION**

#111 C, 1st Phase, KIADB Industrial Area, Bommasandra, Hosur Main Road,
Bangalore-560099, Karnataka, India
**Email:** info@williamsrefrigeration.in
**Mobile: +91 98440 13768**

Williams refrigeration

Williams PROFESSIONAL






ಸ್ವಾತಿ ಹೋಟೆಲ್ ಮಾಲೀಕರಾದ ಜಿ.ಕೆ. ಶೆಟ್ಟಿಯವರ ನೂತನ ಹೋಟೆಲ್ ಅಟೈಡ್ ಬಿಜ್ ಶುಭಾರಂಭವಾಯಿತು.
ಬಿಬಿಹೆಚ್‌ಎ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಭಾಗವಹಿಸಿ ಶುಭಕೋರಿದರು.




ರಾಜಾಜಿನಗರದಲ್ಲಿ ನೂತನವಾಗಿ ಆರಂಭಗೊಂಡ
ಸುಮಧುರ ದರ್ಶನ ಹೋಟೆಲಗೆ ಶುಭ ಕೋರಿಕೆ.




ವಿಶ್ವನಾಥ್ ಶೆಟ್ಟಿಯವರ ಮಾಲೀಕತ್ವದ ಶ್ರೀ ದೇವಿ
ವೈಭವ ಹೋಟೆಲ್ ಶುಭಾರಂಭವಾಯಿತು.





ಹಿರಿಯ ಹೋಟೆಲ್ ಉದ್ಯಮಿ ಎನ್.ಆರ್.
ನಾರಾಯಣ ರಾವ್‌ರವರಿಗೆ ವಿಪ್ರಶ್ರೀ ಪ್ರಶಸ್ತಿ ಪ್ರಧಾನ.







ಕೆಪಿಎಚ್‌ಆರ್‌ಎ ವತಿಯಿಂದ ಕಾರವಾರದಲ್ಲಿ ವಿಶೇಷ ಸಭೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಬೆಂಗಳೂರಿನ ಹೋಟೆಲ್ ಮಾಲೀಕರು ಭಾಗವಹಿಸಿದ್ದರು. ನಂತರ ಗೋವಾಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಮತ್ ಹೋಟೆಲ್ ಹಾಗೂ ಸಾಯಿ ಸಾಗರ್ ಹೋಟೆಲ್‌ಗಳ ವಿಶೇಷ ಆತಿಥ್ಯ ಸತ್ಕಾರಕ್ಕೆ ಸಂಘದ ವತಿಯಿಂದ ಧನ್ಯವಾದಗಳು.




ಜಾಹೀರಾತು

IRCLASS
SYSTEMS AND SOLUTIONS PRIVATE LIMITED

Certification

- ISO 22000 Certification (Food Safety Management System)
- HACCP (Hazards Analysis Critical Control Point)
- FSSC 22000 Certification (Food Safety System Certificate)
- ISO 9001 (Quality Management System)
- BRC (British Retail Consortium)
- FAMI – QS(Feed Additives & Pre-Mixtures quality System)
- GMP – (Good Manufacturing Practices)
- Inspection
- Second Party Audits
- Food Safety / Hygiene audits
- FSSAI Audits
- FOSTAC
- BHOG

CONTACT:
**Kajal N Shahapurkar**
**8884892071**
Kajal.shahapurkar@irclass.org

## ಹೊಸ ರುಚಿ



ಹಲಸಿನ ಹಣ್ಣಿನ ಮಿಲ್ಕ್ ಶೇಕ್

ಹಲಸಿನ ಹಣ್ಣಿನ ಕಾಲ ಬಂದಿದೆ. ಹಲಸಿನ ಹೊಸರುಚಿಗಳು ಏನೇನು ಬಂದಿವೆಯೋ ಎಂಬ ಕುತೂಹಲ ಇರುತ್ತದಲ್ಲ? ನೋಡಿ ಹಲಸಿನ ಹಣ್ಣಿನ ಮಿಲ್ಕ್ ಶೇಕ್ ಬಂದಿದೆ. ಚಿತ್ರಕಲಾಪರಿಷತ್ತಿನ ಕಾಮತ್ ಕಲಾರುಚಿ ಉಪಾಹಾರ ಮಂದಿರದಲ್ಲಿ ಹಲಸಿನ ಹಣ್ಣಿನ ಮಿಲ್ಕ್ ಶೇಕ್ ಸವಿದೆ.

ಹೋಟೆಲಿನ ಮಾಲೀಕರಾದ ವೀರೇಂದ್ರ ಕಾಮತರಲ್ಲಿ ಪ್ರಶ್ನಿಸಿದೆ.

ಏನಿದು? ಕರಬೂಜವೇ?

ಅಲ್ಲ ಎಂದರು.

ಐಸ್ ಕ್ರೀಮ್ ಹಾಕಿದ ಹಾಗಿದೆ ಎಂದೆ.

ಇಲ್ಲ ಎಂದರು.

ಅಷ್ಟು ಹೊತ್ತಿಗೆ ರುಚಿಯನ್ನು ನನ್ನ ಮನಸ್ಸು ಪತ್ತೆ ಮಾಡಿತ್ತು. ಇದು ಹಲಸಿನ ಹಣ್ಣಿನ ರಸ ಅಂದೆ.

ಹೌದು ಅಂದರು. ಅದಕ್ಕೆ ಸ್ವ...ಲ್ಪ ಸಕ್ಕರೆ ಮತ್ತು ಹಾಲು ಹಾಕಿ ಮಿಕ್ಸಿಯಲ್ಲಿ ಗಿರ್ರಂತ ತಿರುಗಿಸಿದರೆ ಹಲಸಿನ ಹಣ್ಣಿನ ಮಿಲ್ಕ್‌ಶೇಕ್ ಸಿದ್ಧ ಎಂದರು.

ನೀವೂ ಸವಿದು ನೋಡಿ.

**–ಶರತ್**

# Employing children below 14 Years is an offence

Raising the bar on child labour, the government is set to debar employment of children below the age 14 in any industry. Only those between 14 to 18 year can be employed except in hazardous industries. The existing child labour (Prohibition and regulation) Act, 1986, allows employment of children of up to 14 years of age in the industries not considered to be hazardous. Hazardous industries include tobacco, stone crushing, mining cement industry and crackers.

The ILO convention of child labour seeks to provide minimum age of employment and says that no children below the age of 14 should be employed. India has to abide by the convention as its own domestic law-Right To Education guarantees free and compulsory education to all children in the age group of 6-4 years.

“Employing any children below the age of 14 will be a criminal offence,” As per 2001 census, there were 1.29 crore child labourers in india. The data on child labour for 2011 is yet to be released.

The ministry has, however not accepted recommendation of the national commission for protection of child rights for defining of a child as of 18 year on the ground that a large number of poor families are dependant on their children for livelihood.

Therefore, the ministry has proposed that children in 14-18 age group should be allowed to seek work in non-hazardous industries with property safety mechanism.

ಜಾಹೀರಾತು













GOUTHAM
MEDIA PRINTS
LED SIGNAGES

MANUFACTURERS OF:

3D LED SIGNAGES,
TITANIUM LETTERS,
STAINLESS STEEL LETTERS,
ALUMINIUM PROFILE LETTERS,
TRANSLITES, ROLLUP STANDYS,
POINT OF PURCHASE DISPLAYS,
ECO SOLVENT PRINTING ETC.

WITH STATE OF ART
IN HOUSE
MANUFACTURING FACILITY

# 558, Sy. No. 49/5, 2nd Floor, Opp. Lakshmi Super Speciality Hospital, Magadi Main Road, Sunkadakatte, Bengaluru - 560 091.
e-mail : gmpsignworld@gmail.com (M) : 98867 43333

ಜಾಹೀರಾತು

ಶ್ರೀ ಮಂಜುನಾಥ ಸ್ವೀಟ್ಸ್

ಮದುವೆ, ಮುಂಜಿ ಮತ್ತು ಇತರ ಶುಭ ಸಮಾರಂಭಗಳಿಗೆ ಅತ್ಯುತ್ತಮ ಗುಣಮಟ್ಟದ ಸಿಹಿತಿನಿಸು ಮತ್ತುಖಾರದ ತಿನಿಸುಗಳನ್ನು ತಯಾರಿಸಿ ಸಗಟು ವ್ಯಾಪರದದರದಲ್ಲಿ ನೀಡಲಾಗುವುದು. ಹೋಟೆಲುಗಳಿಗೆ ಜಾಮೂನು ಮತ್ತು ಇತರ ಸಿಹಿ ತಿನಿಸುಗಳನ್ನು ಆಕರ್ಷಕ ರಿಯಾಯಿತಿ ದರದಲ್ಲಿ ಸರಬರಾಜು ಮಾಡಲಾಗುವುದು.

ವಿಶೇಷವಾಗಿ ರೂ. 5/–ಕ್ಕೆ ಜಾಮೂನ್ ದೊರೆಯುತ್ತದೆ
ಹೋಟೆಲ್/ಕ್ಯಾಟರಿಂಗ್/ಬೇಕರಿ ಮತ್ತು
ಕಾಂಡಿಮೆಂಟ್ಸ್‌ಗಳಿಗೆ ಸರ್ವಿಸ್ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಶ್ರೀ. ಲೋಕೇಶ್,ಮಾಲೀಕರು
ಶ್ರೀ. ಮಂಜುನಾಥ ಸ್ವೀಟ್ಸ್
ನಂ.511, 64ನೇ ಅಡ್ಡರಸ್ತೆ, 5ನೇ ವಿಭಾಗ,
ರಾಜಾಜಿನಗರ, ಬೆಂಗಳೂರು–560010
ದೂರವಾಣಿ: 9886033573

ಜಾಹೀರಾತು

ಹಾರ್ದಿಕ
ಶುಭಾಶಯಗಳನ್ನು
ಕೋರುವ

ಪ್ರಿಯದರ್ಶಿನಿ
ರೆಸ್ಟೋರೆಂಟ್

ಶ್ರೀ ರಾಮಕೃಷ್ಣ ಲಾಡ್ಜ್ ಕಟ್ಟಡ, ನಂ. 262,
ಸುಬೇದಾರ್ ಛತ್ರಂ ರಸ್ತೆ,
ಬೆಂಗಳೂರು – 560009
ದೂರವಾಣಿ: 22263793

# ಹೋಟೆಲ್ ಉದ್ಯಮ

ನೋಟಿಫಿಕೇಷನ್ ನಂ. KAE 90 LMW 2015 Dated 16-09-2016 and Corrigendum Dated. ಗೆಜೆಟ್ ಮುದ್ರಣ ದಿನಾಂಕ:– 06-10-2016 w.e.f.01-04-2016. Cost of Living Allowance to be paid over and above 6205. ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್:– 7616-6205=1411 Points. ಮಿನಿಮಮ್ ವೇಜಸ್ ಮತ್ತು ವಿ.ಡಿ.ಎ :– from 01-04-20 to 31-03-2021

ಪ್ರಸಕ್ತ ವರ್ಷ (7616–7268)= 348 Points ಹೆಚ್ಚಳ

## ಷೆಡ್ಯೂಲ್

| ಕ್ರಮ ಸಂಖ್ಯೆ | ಕ್ಲಾಸ್ ಆಫ್ ಎಂಪ್ಲಾಯಮೆಂಟ್ | | ವಲಯ – ಎ | ವಲಯ – ಬಿ | ವಲಯ –ಸಿ |
|---|---|---|---|---|---|
| 1 | ಅಡಿಗೆಯವರು / ಸಿಹಿ ತಿಂಡಿ | ಬೇಸಿಕ್<br>ವಿಡಿಎ<br>ಮೊತ್ತ | 11,830–00<br>1,693–20<br>13,523–20 | 11,570–00<br>1,693–20<br>13,263–20 | 10,790–00<br>1,693–20<br>12,483–20 |
| 2 | ಸೂಪರ್‌ವೈಸರ್/ಅಡಿಗೆ ಮನೆ ಸೂಪರ್‌ವೈಸರ್ | ಬೇಸಿಕ್<br>ವಿಡಿಎ<br>ಮೊತ್ತ | 11,700–00<br>1,693–20<br>13,393–20 | 11,440–00<br>1,693–20<br>13,133–20 | 10,660–00<br>1,693–20<br>12,353–20 |
| 3 | ಬಾರಮನ್ | ಬೇಸಿಕ್<br>ವಿಡಿಎ<br>ಮೊತ್ತ | 11,050–00<br>1,693–20<br>12,743–20 | 10,790–00<br>1,693–20<br>12,483–20 | 10,140–00<br>1,693–20<br>11,833–20 |
| 4<br>5 | ಸಹಾಯಕ ಅಡಿಗೆಯವರು/ದೊಸೆ ಮಾಡುವವರು ಚಪಾತಿ ಮಾಡುವವರು/ಇಡ್ಲಿ ಮಾಡುವವರು ರೂಂ ಬಾಯ್/ ಸಹಾಯಕ ರೂಂ ಬಾಯ್ | ಬೇಸಿಕ್<br>ವಿಡಿಎ<br>ಮೊತ್ತ | 10,660–00<br>1,693–20<br>12,353–20 | 10,400–00<br>1,693–20<br>12,093–20 | 9,750–00<br>1,693–20<br>11,443–20 |
| 6 | ಕಾಫಿ ಮಾಡುವವರು/ಟೀ ಮಾಡುವವರು/ ಸರ್ವರ್ ಸಪ್ಪೈಯರ್/ವೇಟರ್/ಬೇರರ್/ಬಟ್ಲರ್/ಗ್ರೈಂಡರ್ | ಬೇಸಿಕ್<br>ವಿಡಿಎ<br>ಮೊತ್ತ | 10,400–00<br>1,693–20<br>12,093–20 | 10,140–00<br>1,693–20<br>11,833–20 | 9,490–00<br>1,693–20<br>11,183–20 |
| 7<br>8 | ತರಕಾರಿ ಕಟ್ ಮಾಡುವವರು/ ಮಾಂಸ ಕಟ್ ಮಾಡುವವರು/ಪಾರ್ಸಲ್ ಬಾಯ್/ನೀರು ತರುವವ ಗಾರ್ಡನರ್ರ / ಧೋಬಿ | ಬೇಸಿಕ್<br>ವಿಡಿಎ<br>ಮೊತ್ತ | 10,010–00<br>1,693–20<br>11,703–20 | 9,750–00<br>1,693–20<br>11,443–20 | 9,100–00<br>1,693–20<br>10,793–20 |
| 9<br>10 | ಸ್ವಾಗತಗಾರ/ ಟೆಲಿಫೋನ್ ಆಪರೇಟರ್ | ಬೇಸಿಕ್<br>ವಿಡಿಎ<br>ಮೊತ್ತ | 12,090–00<br>1,693–20<br>13,783–20 | 11,830–00<br>1,693–20<br>13,523–20 | 11,050–00<br>1,693–20<br>12,743–20 |
| 11 | ಎಲೆಕ್ಟ್ರೀಶಿಯನ್ | ಬೇಸಿಕ್<br>ವಿಡಿಎ<br>ಮೊತ್ತ | 10,790–00<br>1,693–20<br>12,483–20 | 10,530–00<br>1,693–20<br>12,223–20 | 10,010–00<br>1,693–20<br>11,703–20 |
| 12 | ಲಿಫ್ಟ್ ಅಟೆಂಡರ್ | ಬೇಸಿಕ್<br>ವಿಡಿಎ<br>ಮೊತ್ತ | 10,010–00<br>1,693–20<br>11,703–20 | 9,750–00<br>1,693–20<br>11,443–20 | 9,100–00<br>1,693–20<br>10,793–20 |
| 13 | ಲೆಕ್ಕ ಬರೆಯುವವರು | ಬೇಸಿಕ್<br>ವಿಡಿಎ<br>ಮೊತ್ತ | 12,350–00<br>1,693–20<br>14,043–20 | 12,090–00<br>1,693–20<br>12,783–20 | 11,310–00<br>1,693–20<br>13,003–20 |
| 14 | ಗುಮಾಸ್ತ/ಟೈಪಿಸ್ಟ್/ಸ್ಟೋರ್‌ಕೀಪರ್/ಕ್ಯಾಷಿಯರ್ | ಬೇಸಿಕ್<br>ವಿಡಿಎ<br>ಮೊತ್ತ | 12,090–00<br>1,693–20<br>13,783–20 | 11,830–00<br>1,693–20<br>13,523–20 | 11,050–00<br>1,693–20<br>12,743–20 |
| 15 | ಕ್ಲೀನರ್/ಅಟೆಂಡರ್/ವಾಚ್‌ಮೆನ್/ಸ್ಲೀಪರ್ ಆಫೀಸ್ ಬಾಯ್/ಆಫೀಸ್ ಅಸಿಸ್ಟೆಂಟ್/ಎಲ್ಲಾ ವರ್ಗದ ಮೇಲ್ಕಾಣಿಸಿದ ಕೆಲಸವನ್ನು ಮಾಡುವವರು | ಬೇಸಿಕ್<br>ವಿಡಿಎ<br>ಮೊತ್ತ | 10,010–00<br>1,693–20<br>11,703–20 | 9,750–00<br>1,693–20<br>11,443–20 | 9,100–00<br>1,693–20<br>10,793–20 |
| 16 | ಬೇರೆ ವರ್ಗದ ಅನ್ ಸ್ಕಿಲ್ಲ್‌ಡ್ ಕೆಲಸಗಾರರ ಪಟ್ಟಿಯಲ್ಲಿ ನಮೂದಿಸಿಲ್ಲ. | ಬೇಸಿಕ್<br>ವಿಡಿಎ<br>ಮೊತ್ತ | –––– | –––– | –––– |

ವಲಯ– ಎ: ಬೆಂಗಳೂರು ಸಿಟಿ ಏರಿಯಾ ಮತ್ತು ಮುನಿಸಿಪಲ್ ಕಾರ್ಪೋರೇಷನ್ ಏರಿಯಾ ಹೊರತುಪಡಿಸಿ ,ರಾಜ್ಯದಲ್ಲಿ
ವಲಯ– : ಬಿ :– ರಾಜ್ಯದ ಜಿಲ್ಲೆಯ ಹೆಡ್ ಕ್ವಾರ್ಟರ್ಸ್
ವಲಯ– : ಸಿ:– ರಾಜ್ಯ ಇತರೆ ಏರಿಯಾ ಒಳಪಟ್ಟಿರದ ಇದ್ದು ಇದು ವಲಯ– ಎ, ವಲಯ– ಬಿ ಫುಡ್ ಡಿಡಕ್ಷನ್.
ವಿಡಿಎ :– ಎಲ್ಲಾ ವರ್ಗದ ಕಾರ್ಮಿಕರಿಗೆ 4 ಪೈಸೆ ಪ್ರತಿ ಪಾಯಿಂಟಗೆ ದಿನವೊಂದಕ್ಕೆ ಇದರ ಮೇಲ್ಪಟ್ಟ 6205 ಪಾಯಿಂಟಗಳು.

ತುಟ್ಟಿ ಭತ್ಯೆ ಹೆಚ್ಚಳ: –ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇಲಾಖೆಯಿಂದ ನಮ್ಮ ಸಂಘಕ್ಕೆ ಬಂದಿರುವ ಮಾಹಿತಿಯಂತೆ 2019 ನೇ ಸಾಲಿನ ಕರ್ನಾಟಕ ರಾಜ್ಯದ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕದ ವಾರ್ಷಿಕ ಸರಾಸರಿ ಅಂಶವನ್ನು 7616 ಗಳಿಗೆ ಹೆಚ್ಚಿಸಲಾಗಿದೆ.

ಜಾಹೀರಾತು

# Chikmagalur's No.1 Coffee

CELEBRATING 68 YEARS COFFEE EXPERIENCE

Winner of 2019 BUSINESS & QUALITY EXCELLENCE Award

Authentic Chikkamagalur Filter Coffee




Cut and exchange this for free coffee powder and entitle yourself for a lucky dip

WIN COFFEE MAKER WORTH ₹10,000

Name: ____________________

Address ____________________

____________________

Phone No.:____________________

Mfg By: **SUNSHINE ENTERPRISES,** SPL-P 140, KSSIDC Industrial Area, K.M.Road, Jyothinagara Post, CHIKMAGALUR - 577 102. ✆ **86182 67662**

ಅತಿಥಿ ದೇವೋಭವ
ATHITHI DEVOBHAVA

www.bangalorehotelsassn.com
BANGALORE

## ವಾರ್ಷಿಕ ವಂತಿಗೆಗೆ ಮನವಿ

ಮಾನ್ಯ ಸದಸ್ಯ ಬಂಧುಗಳೇ,

ಸಂಘದ ಆರ್ಥಿಕ ಬಲವರ್ಧನೆ ಮತ್ತು ಮೆಸೆಂಜರುಗಳ ಓಡಾಟದ ಸಮಯ ಉಳಿಸುವ ದೃಷ್ಟಿಯಿಂದ ಇದೇ ಏಪ್ರಿಲ್ 2019ರಿಂದ ಪ್ರಾರಂಭವಾಗಿರುವ ವಿತ್ತ ವರ್ಷದಿಂದ ಸಂಘದ ಸದಸ್ಯರು ತಮ್ಮ ಹಾಲಿ ವರ್ಷದ 12 ತಿಂಗಳುಗಳ ಮಾಸಿಕ ವಂತಿಗೆಗಳನ್ನು ಒಂದೇ ಕಂತಿನಲ್ಲಿ ನೀಡುವ ಮೂಲಕ ಸಹಕಾರ ನೀಡಬೇಕಾಗಿ ವಿನಂತಿಸುತ್ತೇವೆ. ಸಂಘದ ಹೆಸರಿಗೆ ಚೆಕ್ ನೀಡಬಹುದಾಗಿದೆ. ಅಥವಾ ಸಂಘದ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕಾಗಿ ಕೋರುತ್ತೇವೆ. ಸಂಘದ ಖಾತೆಯ ವಿವರಗಳು ಈ ಕೆಳಗಿನಂತಿವೆ.

ಕರ್ಣಾಟಕ ಬ್ಯಾಂಕ್, ಚಾಮರಾಜ ಪೇಟೆ ಬೆಂಗಳೂರು–560018
ಉಳಿತಾಯ ಖಾತೆ ಸಂಖ್ಯೆ: 0582500102635201
ಐ. ಎಫ್.ಎಸ್. ಸಿ ಸಂಖ್ಯೆ : KARB 0000058

| ಪಿ.ಸಿ.ರಾವ್ | ಸುಬ್ರಹ್ಮಣ್ಯ ಹೊಳ್ಳ | ವೀರೇಂದ್ರ ಎಸ್. ಕಾಮತ್ |
|---|---|---|
| ಅಧ್ಯಕ್ಷರು | ಗೌರವ ಕಾರ್ಯದರ್ಶಿ | ಖಜಾಂಚಿ |

ಪ್ರತಿಯೊಬ್ಬ ಸದಸ್ಯರು ಹೊಸ ಸದಸ್ಯರನ್ನಾಗಿ ಮಾಡಲು ಸದಸ್ಯರಲ್ಲಿ ವಿನಂತಿ.

# BBHA Orientation Program



ಇತ್ತೀಚೆಗೆ BBHA ಯ ಸದಸ್ಯರಿಗೆ ಒಂದು ವಿಶೇಷವಾದ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವು ಸುಮಾರು 28 ಯುವ ಸದಸ್ಯರು ಭಾಗವಹಿಸಿದ್ದರು. ಮುಂಜಾನೆ ವಿಶೇಷವಾದ ವ್ಯಾಯಾಮ ಹಾಗೂ ಎಲ್ಲರೂ ಒಮ್ಮತದಿಂದ ಕಾರ್ಯೋನ್ಮುಖ ಮಾಡುವ ಹಲವಾರು ಆಟ, ಯೋಗ ವಿವಿಧ ಚಟುವಟಿಕೆಗಳನ್ನು ತರಬೇತಿಗಾರರು ಮಾಡಿಸಿದರು. ಇದು ಆದ ನಂತರ ನಮ್ಮ ಉದ್ಯಮಕ್ಕೆ ಅಗತ್ಯವಿರುವ ವಿಚಾರ ವಿನಿಮಯಗಳನ್ನು ಹೊಸ ಅವಿಸ್ಕಾರಗಳ ಬಗ್ಗೆ ಚರ್ಚಿಸಲಾಯಿತು. ಇಂತಹ ತರಬೇತಿ ಕಾರ್ಯಕ್ರಮಗಳು ಇನ್ನು ಮುಂದಿನ ದಿನಗಳಲ್ಲಿ ಬಹಳಷ್ಟು ನಡೆಸಬೇಕೆಂದು ಎಲ್ಲರ ಅಭಿಪ್ರಾಯ Fiestaa Resort ಹಾಗೂ ಬೂಟ್ ಕ್ಯಾಂಪ್‌ನಲ್ಲಿ ನಡೆಸಿರುವ ಒಂದು ದಿನದ ಕಾರ್ಯಕ್ರಮ ಬಹಳಷ್ಟು ಯಶಸ್ವಿಯಾಗಿತ್ತು ಹಾಗೂ ಪರಿಣಾಮಕಾರಿಯಾಗಿತ್ತು ಎಂದು ಭಾಗವಹಿಸಿದ ಎಲ್ಲ ಹೋಟೆಲ್ ಮಾಲೀಕರ ಅಭಿಪ್ರಾಯ.


RO UV UF TDS CONTROL
TECHNOLOGY
elixer™
PUREST WATER. HEALTHIEST LIFE.
ಹನಿ, ಹನಿಯೂ ಪರಿಪೂರ್ಣ, ಪರಿಶುದ್ಧ...
ನಿಮ್ಮದೇ ಜಲಮೂಲದಿಂದ ಶುದ್ಧ ಖನಿಜಯುಕ್ತ ಕುಡಿಯುವ ನೀರು ಪಡೆಯಿರಿ!
ಮಿನರಲ್ ವಾಟರ್ ಪ್ಲಾಂಟ್‌ಗಳ ಸಂಪೂರ್ಣ ಶ್ರೇಣಿ
ಇನ್‌ಸ್ಟಿಟ್ಯೂಶನಲ್, ಕಮರ್ಶಿಯಲ್, ಫುಡ್ & ಬೆವರೇಜ್, ಪಬ್ಲಿಕ್ ಫಿಲ್ಲಿಂಗ್ ಮತ್ತು ಡೊಮೆಸ್ಟಿಕ್ ವಿಭಾಗಗಳಲ್ಲಿ
ಇನ್‌ಸ್ಟಿಟ್ಯೂಶನಲ್ ಪ್ಲಾಂಟ್‌ಗಳು
15 to 100 LPH - RO+UV+UF
60 to 100 LPH - UV+UF
ಕಮರ್ಶಿಯಲ್ ಪ್ಲಾಂಟ್‌ಗಳು
25 to 100 LPH - RO+UV+UF
250 to 1000 LPH - RO+UV
500 to 1000 LPH - UV+UF
